YRC
Ass. GOO

693
2/7/16

2/7/16

2/7/16

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಯುವ ರೆಡ್ ಕ್ರಾಸ್ ಘಟಕಗಳಿಗೆ ಸಂಬಂಧಿಸಿದಂತೆ ಆಡಳಿತ ಹಾಗೂ ಕಾರ್ಯನೀತಿ ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ:-
1. ಸರ್ಕಾರದ ಆದೇಶ ಸಂಖ್ಯೆ:ಇಡಿ 64 ವಿವಿಧ 2011, ದಿ:22/12/2011.
2. ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ ಕ್ರಾಸ್ ಸೊಸೈಟಿ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:IRCS/APG/YRC/3750/2015-16, ದಿ:31/03/2016.
3. ಸರ್ಕಾರದ ಆದೇಶ ಸಂಖ್ಯೆ:ಇಡಿ 38 ವಿವಿಧ 2016, ದಿ:06/04/2016.
4. ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ ಇವರ ಪತ್ರ ಸಂಖ್ಯೆ:VCPS:2016-17/357, ದಿ:20/04/2016.

*****

XV ನೇ ಕೇಂದ್ರ ಅಧಿನಿಯಮ-1920ರಡಿ ಸ್ಥಾಪಿತವಾದ ಭಾರತೀಯ ರೆಡ್ ಕ್ರಾಸ್ ಸೊಸೈಟಿಯ ಬಹುಮುಖ್ಯ ಅಂಗವಾದ ಯುವ ರೆಡ್ ಕ್ರಾಸ್ ಘಟಕವನ್ನು ಪ್ರಾರಂಭಿಸಲು ಉನ್ನತ ಶಿಕ್ಷಣ ಇಲಾಖೆಯ ಆಡಳಿತ ಹಾಗೂ ಶೈಕ್ಷಣಿಕ ನಿಯಂತ್ರಣಕ್ಕೊಳಪಡುವ ಎಲ್ಲಾ ಸರ್ಕಾರಿ/ಅನುದಾನಿತ ಹಾಗೂ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು, ಇಂಜಿನಿಯರಿಂಗ್/ಪಾಲಿಟೆಕ್ನಿಕ್ ಕಾಲೇಜುಗಳಿಗೆ ಮೇಲೆ ಕ್ರಮಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ನಿರ್ದೇಶನ ನೀಡಲಾಗಿತ್ತು. ಮುಂದುವರೆದು, ಮಾನವೀಯತೆ, ನಿಷ್ಪಕ್ಷಪಾತ, ತಟಸ್ಥನೀತಿ, ಅಪರತಂತ್ರ, ಸ್ವಯಂಸೇವಾ ಮನೋಧರ್ಮ ಹಾಗೂ ಸರ್ವಲೌಕಿಕತ್ವದಂತಹ ತತ್ವಗಳನ್ನು ವಿದ್ಯಾರ್ಥಿಗಳಲ್ಲಿ ಮೈಗೂಡಿಸುವ ದಿಕ್ಕಿನಲ್ಲಿ ಯುವ ರೆಡ್ ಕ್ರಾಸ್ ಹೊಂದಿರುವ ಸಂಕಲ್ಪ ಹಾಗೂ ಉದ್ದೇಶಗಳನ್ನು ಈಡೇರಿಸಲು ಹಾಗೂ ಆರೋಗ್ಯ, ನಾಗರೀಕ ಹೊಣೆಗಾರಿಕೆ, ಸದ್ಭಾವನೆ ಮತ್ತು ಸ್ವಯಂ ಸೇವಾ ಮನೋಧರ್ಮಗಳಂತಹ ಆದರ್ಶ ಮತ್ತು ಪರಿಪಾಠಗಳನ್ನು ಯುವಕರಲ್ಲಿ ಸದೃಢಗೊಳಿಸುವುದಕ್ಕೆ ಅಭಿಮುಖವಾದ ರೆಡ್ ಕ್ರಾಸ್‌ನ ಪ್ರಯತ್ನಗಳಲ್ಲಿ ನೆರವಾಗಲು ಅನುವಾಗುವಂತೆ ಒಂದು ಬಾರಿಗೆ ರೂ.1,500 ಗಳನ್ನು ಪಾವತಿಸಲು ಹಾಗೂ ಪ್ರವೇಶ ದಾಖಲಾತಿ ವೇಳೆ ಪ್ರತಿ ವಿದ್ಯಾರ್ಥಿಯಿಂದ ರೂ.50/-ಗಳನ್ನು ಶುಲ್ಕವಾಗಿ ಸಂಗ್ರಹಿಸಲು ಸೂಚಿಸಲಾಗಿತ್ತು. ಈ ರೀತಿ ಸಂಗ್ರಹಿಸಲಾಗುವ ಶುಲ್ಕದ ಸದ್ವಿನಿಯೋಗಕ್ಕಾಗಿ ಪೂರ್ವೋಕ್ತ ಆದೇಶದಲ್ಲಿ ಕ್ರಮಪದ್ಧತಿಗಳನ್ನು ನಿಗದಿಪಡಿಸಲಾಗಿತ್ತು.

ಯುವ ರೆಡ್‌ಕ್ರಾಸ್ ಸಂಸ್ಥೆಗಳ ಸ್ಥಾಪನೆ ಮತ್ತು ಉದ್ದೇಶಗಳನ್ನು ಈಡೇರಿಸಲು ಯುವ ರೆಡ್ ಕ್ರಾಸ್ ಘಟಕ ಸರ್ಕಾರದ ಅನುಮೋದನೆ ಹಾಗೂ ಅಧಿಕೃತ ಮಾನ್ಯತೆ ಪಡೆದ ಏಕರೂಪದ ಮಾರ್ಗಸೂಚಿಗಳನ್ನು ರೂಪಿಸುವುದು, ಎಲ್ಲಾ ಕಾಲೇಜುಗಳ ಸ್ಥಿರ ಚಟುವಟಿಕೆಗಳನ್ನು ಮಾಡುವುದು ಮತ್ತು ಕಾಲೇಜುಗಳ ಕಾರ್ಯನಿರ್ವಹಣೆಯಲ್ಲಿ ಹೊಂದಾಣಿಕೆ ತರುವುದು, ರೆಡ್ ಕ್ರಾಸ್ ಸಂಸ್ಥೆ ಭಾವಿಸಿದಂತೆ ಇಂದಿನ ತೀವ್ರ ಹಾಗೂ ತುರ್ತು ಅವಶ್ಯಕತೆಗಳಾಗಿರುತ್ತವೆ. ತತ್ಪರಿಣಾಮವಾಗಿ, ಕಾಲೇಜುಗಳಲ್ಲಿನ ಯುವ ರೆಡ್ ಕ್ರಾಸ್ ಘಟಕಗಳ ಕಾರ್ಯ ಚಟುವಟಿಕೆಗಳಲ್ಲಿ ಏಕಪ್ರಕಾರತೆ, ಋಜುತ್ವ, ಹೊಣೆಗಾರಿಕೆ, ಪ್ರಾಮಾಣಿಕತೆ ಹಾಗೂ ಪಾರದರ್ಶಕತೆಗಳನ್ನು ಖಚಿತಪಡಿಸುವ ನಿಟ್ಟಿನಲ್ಲಿ ಎನ್.ಸಿ.ಸಿ., ಎನ್.ಎಸ್.ಎಸ್., ಮತ್ತು ರೋವರ್ಸ್ &

---2

ರೇಂಜರ್ಸ್ ನಂತಹ ಸಂಸ್ಥೆಗಳ ಮೇಲ್ಪಂಕ್ತಿಯನ್ನು ಅನುಸರಿಸಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯಿಂದ ಆಡಳಿತ ಕಾರ್ಯನೀತಿ ಹಾಗೂ ಆರ್ಥಿಕ ನಿರ್ದೇಶನಗಳನ್ನು ಮತ್ತು ಕ್ರಮವಿಧಿ/ಕಾರ್ಯಕ್ರಮ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ.

ಅದರಂತೆ ಪೂರ್ವೋಕ್ತ ಕರಡು ಮಾರ್ಗಸೂಚಿಗಳನ್ನು ಜಾರಿಗೆ ತರುವಂತೆ ಹಾಗೂ ಅವುಗಳನ್ನು ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಎಲ್ಲಾ ಕಾಲೇಜುಗಳು/ಪಾಲಿಟೆಕ್ನಿಕ್‌ಗಳು ಕಟ್ಟುನಿಟ್ಟಾಗಿ ಅನುಸರಿಸುವ ನಿಟ್ಟಿನಲ್ಲಿ ಕ್ರಮವಹಿಸುವಂತೆ ಕೋರಿ ಮೇಲೆ ಕ್ರ.ಸಂ.02 ರಲ್ಲಿ ಓದಲಾದ ಪತ್ರದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಮಾರ್ಗಸೂಚಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಸಂಬಂಧದಲ್ಲಿ ಸಲಹೆ-ಸೂಚನೆಗಳನ್ನು ನೀಡಲು ಮೇಲೆ ಓದಲಾದ ಕ್ರ.ಸಂ.03ರ ಆದೇಶದನ್ವಯ ಡಾ॥ ಎ.ಹೆಚ್.ರಾಜಾಸಾಬ, ಉಪ ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ ಇವರ ಅಧ್ಯಕ್ಷತೆಯಲ್ಲಿ ಪರಿಣಿತರ ಸಮಿತಿಯನ್ನು ರಚಿಸಲಾಗಿತ್ತು. ದಿನಾಂಕ:19/04/2016ರಂದು ನಡೆದ ಸಭೆಯಲ್ಲಿ ಸುಧೀರ್ಘ ಪರ್ಯಾಲೋಚನೆ ನಡೆಸಿ ಕರಡು ಮಾರ್ಗಸೂಚಿಗಳಲ್ಲಿನ ಪ್ರತಿಯೊಂದು ಅಂಶಗಳನ್ನು ಪರಿಶೀಲಿಸಿದ ತರುವಾಯ ಸದಸ್ಯರುಗಳು ಸೂಚಿಸಿದ ಸೇರ್ಪಡೆ ಮತ್ತು ವಿಲೋಪನೆಗಳನ್ನು ಅಳವಡಿಸಿಕೊಂಡ ಸಮಿತಿಯಿಂದ ಪರಿಷ್ಕೃತ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ.

ಸಮಿತಿಯ ಅಧ್ಯಕ್ಷರಾದ ಡಾ॥ ಎ.ಹೆಚ್.ರಾಜಾಸಾಬ, ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ ಇವರು ಮೇಲೆ ಓದಲಾದ ಕ್ರ.ಸಂ.04ರಲ್ಲಿನ ಆದೇಶದನ್ವಯ ಸಲ್ಲಿಸಿದ ಪರಿಷ್ಕೃತ ಮಾರ್ಗಸೂಚಿಗಳನ್ನು ಸಮಗ್ರವಾಗಿ ಪರಾಮರ್ಶಿಸಿದ ತರುವಾಯ ಪರಿಗಣಿಸಿದ ಸರ್ಕಾರವು ಉನ್ನತ ಶಿಕ್ಷಣ ಇಲಾಖೆಯಲ್ಲಿ ಶೈಕ್ಷಣಿಕ ಸಂಸ್ಥೆಗಳಲ್ಲಿ . ಯುವ ರೆಡ್ ಕ್ರಾಸ್ ಘಟಕಗಳ ಕಾರ್ಯಚಟುವಟಿಕೆ/ಕ್ರಮವಿಧಿಗಳನ್ನು ಫಲಪ್ರದವಾಗಿ/ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ದೇಶದಲ್ಲಿಯೇ ಪ್ರಥಮವಾಗಿ ವ್ಯಾಪಕ ಹಾಗೂ ವಿಸ್ತೃತ ಮಾರ್ಗಸೂಚಿಗಳನ್ನು ರೂಪಿಸಲು ಉದ್ದೇಶಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 38 ವಿವಿಧ 2016, ಬೆಂಗಳೂರು, ದಿನಾಂಕ:17/06/2016**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆಡಳಿತ ಮತ್ತು ಶೈಕ್ಷಣಿಕ ಅಧಿಕಾರ ವ್ಯಾಪ್ತಿಗೊಳಪಡುವ ಎಲ್ಲಾ ಸರ್ಕಾರಿ/ಅನುದಾನಿತ ಹಾಗೂ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು, ಇಂಜಿನಿಯರಿಂಗ್/ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಯುವ ರೆಡ್ ಕ್ರಾಸ್ ಚಟುವಟಿಕೆಗಳ ಕಾರ್ಯನಿರ್ವಹಣೆಯಲ್ಲಿ ಏಕಪ್ರಕಾರತೆ, ಋಜುತ್ವ, ಹೊಣೆಗಾರಿಕೆ, ವಿಶ್ವಾಸಾರ್ಹತೆ ಮತ್ತು ಪಾರದರ್ಶಕತೆ ತರಲು ಈ ಆದೇಶದೊಂದಿಗೆ ಅನುಬಂಧಿಸಲಾಗಿರುವ ಅನುಸೂಚಿ-ಎ ಮತ್ತು ಅನುಸೂಚಿ-ಬಿ ರಲ್ಲಿ ನಿಯಮಿಸಲಾಗಿರುವ ಆಡಳಿತ, ಕಾರ್ಯನೀತಿ ಮತ್ತು ಆರ್ಥಿಕ ನಿರ್ದೇಶನಗಳನ್ನು ಹಾಗೂ ಕಾರ್ಯಕ್ರಮ/ಕ್ರಮವಿಧಿ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿದೆ.

ಪೂರ್ವೋಕ್ತ ಆಡಳಿತ, ಕಾರ್ಯನೀತಿ ಮತ್ತು ಆರ್ಥಿಕ ನಿರ್ದೇಶನಗಳನ್ನು ಹಾಗೂ ಕಾರ್ಯಕ್ರಮ/ಕ್ರಮವಿಧಿ ಮಾರ್ಗಸೂಚಿಗಳಿಗೆ ಬದ್ಧರಾಗಿ ಅವುಗಳನ್ನು ಚಾಚೂತಪ್ಪದೇ ಪರಿಪಾಲಿಸಲು ಎಲ್ಲಾ ಸರ್ಕಾರಿ, ಅನುದಾನಿತ/ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್/ಇಂಜಿನಿಯರಿಂಗ್ ಕಾಲೇಜುಗಳಿಗೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎಲ್.ಸುಬ್ರಮಣ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ಸಾಮಾನ್ಯ-2)

ಇವರಿಗೆ:-

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4) ಕುಲಪತಿಗಳು/ಕುಲಸಚಿವರು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು.
5) ಅಧ್ಯಕ್ಷರು, ಭಾರತೀಯ ರೆಡ್ ಕ್ರಾಸ್ ಸೊಸೈಟಿ, ಕರ್ನಾಟಕ ರಾಜ್ಯ ಶಾಖೆ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್ ಕ್ರಾಸ್ ಸೊಸೈಟಿ, ಕರ್ನಾಟಕ ರಾಜ್ಯ ಶಾಖೆ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
7) ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳು/ಪಾಲಿಟೆಕ್ನಿಕ್‌ಗಳು-(ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಮೂಲಕ).
8) ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು-(ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆಯ ಮೂಲಕ).
9) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.

## ಅನುಸೂಚಿ–ಎ

## ಯುವ ರೆಡ್‌ಕ್ರಾಸ್ – ನೀತಿ, ಆಡಳಿತಾತ್ಮಕ ನಿರ್ದೇಶನಗಳು ಮತ್ತು ಕಾರ್ಯಕ್ರಮ ಮಾರ್ಗದರ್ಶಿಸೂತ್ರಗಳು.

ನೀತಿ:

ಯುವ ರೆಡ್‌ಕ್ರಾಸ್, ಅದರ ಮಾತೃ ಸಂಸ್ಥೆ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಒಂದು ಪ್ರಾಮುಖ್ಯ ಘಟಕವಾಗಿದೆ. ರೆಡ್‌ಕ್ರಾಸ್‌ನ ಏಳು ಮೂಲಭೂತ ತತ್ವಗಳಾದ ಮಾನವೀಯತೆ, ಪಕ್ಷಪಾತರಾಹಿತ್ಯ ತಾಟಸ್ಥ್ಯ, ಸ್ವಾತಂತ್ರ್ಯ, ಸ್ವಯಂಸೇವೆ, ಏಕತೆ ಮತ್ತು ವಿಶ್ವವ್ಯಾಪಕತೆಯನ್ನು ಮೈಗೂಡಿಸುವ ಗುರಿ ಹೊಂದಿದೆ. ವಿದ್ಯಾರ್ಥಿ ಯುವಸಂಪನ್ಮೂಲವನ್ನು ಅಭಿವೃದ್ಧಿಪಡಿಸುವ ಮತ್ತು ಈ ತತ್ವಗಳನ್ನು ಕಾರ್ಯರೂಪಕ್ಕಿಳಿಸುವ ಉದ್ದೇಶದಿಂದ ಯುವ ರೆಡ್‌ಕ್ರಾಸ್‌ನ್ನು ಸಂಘಟಿಸಲಾಗುತ್ತದೆ. ಇದಲ್ಲದೆ ಕೆಳಕಂಡ ಅಂಶಗಳಿಗೆ ಸಂಬಂಧಿಸಿದಂತೆ ಯುವಜನರಲ್ಲಿ ಆದರ್ಶ ಮತ್ತು ಅದರ ಅನುಷ್ಠಾನವನ್ನು ಅಂತರ್ಗತಗೊಳಿಸುವ ಉದ್ದೇಶವನ್ನು ಹೊಂದಿದೆ.

1. ತನ್ನ ಸ್ವಂತ ಮತ್ತು ಇತರರ ಆರೋಗ್ಯದ ಬಗ್ಗೆ ಗಮನ ಹರಿಸುವುದು.
2. ನಾಗರೀಕ ಹೊಣೆಗಾರಿಕೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಒಪ್ಪಿಕೊಳ್ಳುವುದು.
3. ಚಳುವಳಿಯ ಅಂತರರಾಷ್ಟ್ರೀಯ ಅರಿವು ಮತ್ತು ಸದ್ಭಾವನೆಯನ್ನು ಪ್ರೋತ್ಸಾಹಿಸುವುದು.
4. ಸ್ವಯಂಸೇವಾ ಮನೋಭಾವನೆಯನ್ನು ಬೆಂಬಲಿಸುವುದು.

### 1. ಯುವ ರೆಡ್‌ಕ್ರಾಸ್‌ನ ಸಂಯೋಜನೆ:

ಎಲ್ಲಾ ಸರಕಾರಿ/ಅನುದಾನಿತ/ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳು, ಎಂಜಿನಿಯರಿಂಗ್, ವೈದ್ಯವಿಜ್ಞಾನ, ಕೃಷಿ, ತೋಟಗಾರಿಕೆ, ಪಶುವಿಜ್ಞಾನ, ಅರಣ್ಯಶಾಸ್ತ್ರ, ಮೀನುಗಾರಿಕೆ, ಶಿಕ್ಷಣ, ಕಾನೂನು ಕಾಲೇಜುಗಳು, ಪಾಲಿಟೆಕ್ನಿಕ್‌ಗಳು ಮತ್ತು ಮಾನ್ಯತೆ ಹೊಂದಿದ ಯಾವುದೇ ಪದವಿ ಕಾಲೇಜುಗಳು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಕರ್ನಾಟಕ ರಾಜ್ಯ ಶಾಖೆಯು ಗೊತ್ತುಪಡಿಸಿದ ನಮೂನೆಯಲ್ಲಿ ಪ್ರಸಕ್ತ ಶುಲ್ಕ ರೂ.1,500/–ಗಳನ್ನು ಪಾವತಿಸಿ ಸಂಯೋಜನೆಗಾಗಿ ಅರ್ಜಿ ಸಲ್ಲಿಸಬೇಕು.

ಅರ್ಜಿ ತಲುಪಿದ 30 ದಿನಗಳೊಳಗೆ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಕರ್ನಾಟಕ ರಾಜ್ಯ ಶಾಖೆ ಅರ್ಜಿದಾರರಿಗೆ ಸಂಯೋಜನಾ ಪ್ರಮಾಣಪತ್ರವನ್ನು ನೀಡುತ್ತದೆ.

### 2. ಯುವ ರೆಡ್‌ಕ್ರಾಸ್ ಸದಸ್ಯತ್ವ:

ಪದವಿ, ಸ್ನಾತಕೋತ್ತರ, ಡಿಪ್ಲೊಮಾ ತರಗತಿಗಳಲ್ಲಿ ಪ್ರವೇಶ ಪಡೆದಿರುವ, ವಿಶ್ವವಿದ್ಯಾಲಯದ ಹಾಜರಾತಿ ನಿಯಮಗಳಿಗೆ ಬದ್ಧರಾಗಿದ್ದು, ನಿಗದಿತ ಯುವ ರೆಡ್‌ಕ್ರಾಸ್ ಶುಲ್ಕವನ್ನು ಪಾವತಿಸಿರುವ ಎಲ್ಲ ವಿದ್ಯಾರ್ಥಿ/ವಿದ್ಯಾರ್ಥಿನಿಯರೂ ಆಯಾ ಕಾಲೇಜು, ಪಾಲಿಟೆಕ್ನಿಕ್‌ನ ಯುವ ರೆಡ್‌ಕ್ರಾಸ್‌ನ ಸದಸ್ಯರಾಗುತ್ತಾರೆ.

ಆಂತರಿಕ ತಂಡದ ಸ್ವಯಂ ಸೇವಕರು (ಕೋರ್‌ಗ್ರೂಪ್ ವಾಲಂಟಿಯರ್ಸ್):

ಯುವ ರೆಡ್‌ಕ್ರಾಸ್‌ನ ಉದ್ದೇಶಗಳಿಗಾಗಿ ತನ್ನ ಸಮಯ ಮತ್ತು ಕುಶಲತೆಗಳನ್ನು ಸ್ವಯಂ ಪ್ರೇರಣೆಯಿಂದ ನೀಡಲು ಸಿದ್ಧರಿರುವ ಯುವ ರೆಡ್‌ಕ್ರಾಸ್‌ನ ಯಾವುದೇ ಸದಸ್ಯರು ಕಾರ್ಯಕ್ರಮ ಅಧಿಕಾರಿಗೆ ಅರ್ಜಿ ಸಲ್ಲಿಸಿ, ಆಯ್ಕೆಗೊಂಡರೆ ಅವರು ಯುವ ರೆಡ್‌ಕ್ರಾಸ್‌ನ ಆಂತರಿಕ ತಂಡದ ಸ್ವಯಂ ಸೇವಕರಾಗುತ್ತಾರೆ.

3. ಯುವ ರೆಡ್‌ಕ್ರಾಸ್ ಘಟಕ:

ಅ) ಯುವ ರೆಡ್‌ಕ್ರಾಸ್ ಘಟಕದಲ್ಲಿ ನೂರು ಜನ ಅಂತರಿಕ ತಂಡದ ಸ್ವಯಂ ಸೇವಕರು ಅಥವಾ ಒಟ್ಟು ಸದಸ್ಯ ಸಂಖ್ಯೆಯಲ್ಲಿನ 33% ಸ್ವಯಂ ಸೇವಕರನ್ನು ಒಳಗೊಂಡಿರುತ್ತದೆ.

ಆ) ಪ್ರತಿ 300 ಅಥವಾ ಅದಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ಒಂದರಂತೆ ಕಾಲೇಜು/ಪಾಲಿಟೆಕ್ನಿಕ್ ಒಂದಕ್ಕಿಂತ ಹೆಚ್ಚು ಯುವ ರೆಡ್‌ಕ್ರಾಸ್ ಘಟಕಗಳನ್ನು ರಚಿಸಬಹುದು.

ಇ) ವಿದ್ಯಾರ್ಥಿಗಳ ಸಂಖ್ಯೆ 300 ಕ್ಕಿಂತಲೂ ಕಡಿಮೆ ಇರುವ ಕಾಲೇಜುಗಳ ಯುವ ರೆಡ್‌ಕ್ರಾಸ್ ಘಟಕಗಳು ಕಡಿಮೆ ಸಂಖ್ಯೆಯ ಸ್ವಯಂಸೇವಕರನ್ನು ಒಳಗೊಂಡಿರಬಹುದು.

4. ಕಾರ್ಯಕ್ರಮ ಅಧಿಕಾರಿ:

ಕಾಲೇಜಿನ ಪ್ರಾಂಶುಪಾಲರು

1) ಹುದ್ದೆಗೆ ಅಗತ್ಯವಿರುವ ಜ್ಞಾನ, ಮನೋಭಾವ, ಕುಶಲತೆ ಮತ್ತು ಮೌಲ್ಯಗಳನ್ನು ಹೊಂದಿರುವ ಬೋಧಕ ವರ್ಗದಿಂದ.
2) ತತ್ಸಮಾನ ಅರ್ಹತೆ ಹೊಂದಿರುವ ಶಾರೀರಿಕ ಶಿಕ್ಷಕರು ಅಥವಾ ಗ್ರಂಥಪಾಲಕರಿಂದ.
3) ಪ್ರಾಂಶುಪಾಲರ ವಿವೇಚನೆಗೆ ಒಳಪಟ್ಟು, ತಾತ್ಕಾಲಿಕ ಬೋಧಕ ವರ್ಗದಿಂದ ಕಾರ್ಯಕ್ರಮ ಅಧಿಕಾರಿಯನ್ನು ನೇಮಕ ಮಾಡುವರು.

5. ಅಧಿಕಾರಾವಧಿ:

ಕಾರ್ಯಕ್ರಮ ಅಧಿಕಾರಿಯ ನೇಮಕಾವಧಿ, ಮೊದಲ ಸಂದರ್ಭದಲ್ಲಿ ಮೂರು ವರ್ಷವಿದ್ದು ಪ್ರಾಂಶುಪಾಲರು ಮತ್ತು ವಿಶ್ವವಿದ್ಯಾಲಯದ ಯುವ ರೆಡ್‌ಕ್ರಾಸ್ ನೋಡಲ್ ಅಧಿಕಾರಿಯವರು ಅವರ ಕಾರ್ಯದಕ್ಷತೆಯನ್ನು ಪರಿಶೀಲಿಸಿ ಮತ್ತೊಂದು ಅವಧಿಗೆ ಮುಂದುವರೆಸಬಹುದು.

6. ಕಾರ್ಯಕ್ರಮ ಅಧಿಕಾರಿಯ ಕರ್ತವ್ಯಗಳು:

ಯುವ ರೆಡ್‌ಕ್ರಾಸ್‌ನ ಎಲ್ಲ ಕಾರ್ಯಚಟುವಟಿಕೆಗಳನ್ನು ಸ್ವಯಂಸೇವಕರೇ ಯೋಜಿಸಿ ಕಾರ್ಯಾನ್ವಯಗೊಳಿಸಿ ಮೌಲ್ಯಮಾಪನ ಮಾಡಬೇಕಾಗಿ ನಿರೀಕ್ಷಿಸಲಾಗಿದ್ದು ಕಾರ್ಯಕ್ರಮ ಅಧಿಕಾರಿಗಳು ಅವರ ಮಿತ್ರ ಹಾಗೂ ತತ್ವದರ್ಶಕರಾಗಿ ಸಲಹೆ ನೀಡುತ್ತಾರೆ.

ತಂಡದ ಮುಂದಾಳುವಾಗಿ ಕಾರ್ಯಕ್ರಮ ಅಧಿಕಾರಿಯ ಪಾತ್ರ ತಂಡದ ಗುರಿ ಸ್ಥಾಪನೆ ಮತ್ತು ಗುರಿಯ ಕಡೆ ತಂಡವನ್ನು ಮುನ್ನಡೆಸಲು ಸಹಾಯ ಮಾಡುವುದೇ ಆಗಿರುತ್ತದೆ.

7. ಕೈ ಖರ್ಚಿನ ಭತ್ಯೆ ( ಔಟ್ ಆಫ್ ಪಾಕೆಟ್ ಅಲೋಯನ್ಸ್):-

1) ಯುವ ರೆಡ್‌ಕ್ರಾಸ್ ಕಾರ್ಯಕ್ರಮ ಅಧಿಕಾರಿಗಳು ಮಾಸಿಕ ರೂ.400/-ಗಳ ಕೈ ಖರ್ಚಿನ ಭತ್ಯೆ ಪಡೆಯಲು ಅರ್ಹರಿರುತ್ತಾರೆ.

2) ಚಿಕ್ಕ ಘಟಕ ಇರುವಲ್ಲಿ ಗರಿಷ್ಠ ಮಿತಿಯ 50% ಭತ್ಯೆಗೆ ಅರ್ಹರಿರುತ್ತಾರೆ.

8. ಯುವ ರೆಡ್‌ಕ್ರಾಸ್ ವಿದ್ಯಾರ್ಥಿ ವ್ಯವಸ್ಥಾಪನಾ ಸಮಿತಿ:

ಸ್ವಯಂಸೇವಕರಿಂದ ಆಯ್ಕೆಯಾದ ಅಥವಾ ಚುನಾಯಿತರಾದ 10 ಸದಸ್ಯರ ಸಮಿತಿ ಯುವ ರೆಡ್‌ಕ್ರಾಸ್‌ನ ದೈನಂದಿನ ವ್ಯವಹಾರಗಳನ್ನು ನಿರ್ವಹಿಸುತ್ತದೆ.

ವ್ಯವಸ್ಥಾಪನಾ ಸಮಿತಿ ತನ್ನ ಪ್ರಥಮ ಸಭೆಯಲ್ಲಿ ವಿದ್ಯಾರ್ಥಿ ಉಪಾಧ್ಯಕ್ಷ, ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿಯನ್ನು ಆಯ್ಕೆ ಮಾಡುತ್ತದೆ. ಕಾರ್ಯಕ್ರಮ ಅಧಿಕಾರಿ ಸಮಿತಿಯ ಅಧ್ಯಕ್ಷರಾಗಿರುತ್ತಾರೆ.

9. ಯುವ ರೆಡ್‌ಕ್ರಾಸ್ ಸಲಹಾ ಸಮಿತಿ:

ಕಾಲೇಜು ಮಟ್ಟದಲ್ಲಿ ಸಲಹಾ ಸಮಿತಿ:

1) ಪ್ರಾಂಶುಪಾಲರು – ಅಧ್ಯಕ್ಷರು
2) ಕಾರ್ಯಕ್ರಮ ಅಧಿಕಾರಿ – ಕಾರ್ಯದರ್ಶಿ
3) ಬೋಧಕ ವರ್ಗದಿಂದ ಒಬ್ಬ ಪ್ರತಿನಿಧಿ
4) ವಿದ್ಯಾರ್ಥಿ ಉಪಾಧ್ಯಕ್ಷ
5) ವಿದ್ಯಾರ್ಥಿ ಕಾರ್ಯದರ್ಶಿ
6) ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಜಿಲ್ಲಾ ಅಥವಾ ತಾಲ್ಲೂಕು ಪ್ರತಿನಿಧಿ ಇವರುಗಳನ್ನು ಒಳಗೊಂಡಿರುತ್ತದೆ. ಅನ್ವಯವಾಗುವ ಕಡೆಗಳಲ್ಲಿ, ಮಹಿಳಾ ಪ್ರಾತಿನಿಧ್ಯವಿರುವಂತೆ ನೋಡಿಕೊಳ್ಳುವುದು.

10. ಸಲಹಾ ಸಮಿತಿ ಕರ್ತವ್ಯಗಳು:

ಅ) ಯುವ ರೆಡ್‌ಕ್ರಾಸ್‌ನ ಚಟುವಟಿಕೆಗಳ ಆಯೋಜನೆ ಮತ್ತು ಪರಿಶೀಲನೆ.
ಆ) ಯುವ ರೆಡ್‌ಕ್ರಾಸ್‌ನ ಆಯವ್ಯಯ ಅನುಮೋದನೆ.
ಇ) ಯುವ ರೆಡ್‌ಕ್ರಾಸ್‌ನ ಕ್ರಿಯಾಯೋಜನೆ ತಯಾರಿಸುವುದು.
ಈ) ಯುವ ರೆಡ್‌ಕ್ರಾಸ್ ಸಂಬಂಧಿಸಿದ ಕಾರ್ಯಕ್ರಮ ಮತ್ತು ಚಟುವಟಿಕೆಗಳ ಬಗ್ಗೆ ಸಲಹೆ ನೀಡುವುದು.
ಉ) ಯುವ ರೆಡ್‌ಕ್ರಾಸ್ ಸಂಬಂಧಿಸಿದ ವಿವಾದ ಮತ್ತು ಸಮಸ್ಯೆಗಳನ್ನು ಪರಿಹರಿಸುವುದು.

11. ಹಣಕಾಸು ಲೆಕ್ಕ ಪತ್ರಗಳ ನಿರ್ವಹಣೆ:

ಯುವ ರೆಡ್‌ಕ್ರಾಸ್‌ನಲ್ಲಿ ಸಂಗ್ರಹವಾಗುವ ಶುಲ್ಕದ ಪ್ರತ್ಯೇಕ ಲೆಕ್ಕ ನಿರ್ವಹಣೆ ಹಾಗೂ ಅಧಿಕೃತ ಲೆಕ್ಕ ಪರಿಶೋಧಕರಿಂದ/ಅನುದಾನ ನಿಯಮಗಳಿಗೆ/ಕಾಲೇಜು ನಿಯಮಗಳಿಗೆ ಅನುಸಾರವಾಗಿ ತಪಾಸಣೆ ಮಾಡಿಸುವುದು ಮತ್ತು ವರದಿಯನ್ನು ನೋಡೆಲ್ ಅಧಿಕಾರಿಗೆ ಸಲ್ಲಿಸುವುದು ಕಾಲೇಜಿನ ಹೊಣೆಗಾರಿಕೆ ಆಗಿರುತ್ತದೆ.

12. ಹಣಕಾಸಿನ ನಿಬಂಧನೆಗಳು:

ಪ್ರತಿ ವಿದ್ಯಾರ್ಥಿಯಿಂದ ಸಂಗ್ರಹವಾಗುವ ರೂ.50/- ಶುಲ್ಕದಲ್ಲಿ

1) ರೂ.15/-ನ್ನು ಭಾರತೀಯ ಯುವ ರೆಡ್‌ಕ್ರಾಸ್ ಸಂಸ್ಥೆಯ ಕರ್ನಾಟಕ ರಾಜ್ಯ ಶಾಖೆಗೆ ಜಮಾ ಮಾಡುವುದು. ಭಾರತೀಯ ಯುವ ರೆಡ್ ಕ್ರಾಸ್ ಸಂಸ್ಥೆಯ ಕರ್ನಾಟಕ ರಾಜ್ಯ ಶಾಖೆಯ ಪ್ರತಿ ವಿದ್ಯಾರ್ಥಿಯಿಂದ ಪಡೆಯುವ ರೂ.15/-ಗಳಲ್ಲಿ ಪ್ರತಿ ವಿದ್ಯಾರ್ಥಿಗೆ ರೂ.5/-ರಂತೆ ಆಯಾ ವಿಶ್ವವಿದ್ಯಾಲಯ/ನಿರ್ದೇಶನಾಲಯ ಭರಿಸಬೇಕಾದ ಗೌರವಧನ, ಕಾರ್ಯಕ್ರಮ ಅಧಿಕಾರಿಗಳ ವಾರ್ಷಿಕ ಕಾರ್ಯಕ್ರಮ ಆಯೋಜನೆ ಮತ್ತು ಪರಿಶೀಲನೆ ಸಭೆಯ ಖರ್ಚುವೆಚ್ಚಗಳಿಗಾಗಿ ಪಾವತಿ ಮಾಡುವುದು.
2) ಯುವ ರೆಡ್‌ಕ್ರಾಸ್‌ನ ಕಾರ್ಯಕ್ರಮ ಅಭಿವೃದ್ಧಿಗಾಗಿ ರೂ.35/-ಗಳನ್ನು ಕಾಲೇಜಿನಲ್ಲಿ ಉಳಿಸಿಕೊಳ್ಳುವುದು.

ಈ ಕೆಳಕಂಡ ಖರ್ಚುಗಳನ್ನು ಮಾತ್ರ ಕಾರ್ಯಕ್ರಮ ಅಭಿವೃದ್ಧಿಯ ಖರ್ಚುಗಳು ಎಂದು ಮಾನ್ಯ ಮಾಡಲಾಗುವುದು:-

1) ಕಾರ್ಯಕ್ರಮ ಅಧಿಕಾರಿ, ಸಂಪನ್ಮೂಲ ವ್ಯಕ್ತಿಗಳ, ಸ್ವಯಂಸೇವಕರ ಪ್ರಯಾಣ ವೆಚ್ಚ.
2) ಯೋಜನೆಗೆ ಸಂಬಂಧಿಸಿದ ಖರ್ಚುಗಳು.
3) ಕಾರ್ಯಕ್ರಮ ಅಧಿಕಾರಿಗಳಿಗೆ ಗೌರವಧನ (OPA).
4) ಅಂಚೆ ಮತ್ತು ಮುದ್ರಣ ವೆಚ್ಚ.
5) ಲೇಖನ ಸಾಮಗ್ರಿ, ಸಣ್ಣಪುಟ್ಟ ಸಲಕರಣೆಗಳು ಮತ್ತು ಕಾರ್ಯಾಲಯ ನಿರ್ವಹಣೆಗೆ ಅವಶ್ಯವಿರುವ ಖರ್ಚುಗಳು, ಸ್ವಯಂ ಸೇವಕರಿಗೆ ಉಪಾಹಾರ, ಲಘು ಭೋಜನ ಇತ್ಯಾದಿ.
6) ಸ್ವಯಂಸೇವಕರ ತರಬೇತಿ ವೆಚ್ಚ – ದಿನಕ್ಕೆ ಒಬ್ಬ ವ್ಯಕ್ತಿಗೆ ರೂ.100/- ಮೀರದಂತೆ.
7) ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ ತಲಾ ರೂ.500/- ಮೀರದಂತೆ.
8) ಕಾರ್ಯಾಲಯ ಸಹಾಯಕ ಭತ್ಯೆ ತಿಂಗಳಿಗೆ ರೂ.150/-ರಂತೆ.

ಯುವ ರೆಡ್‌ಕ್ರಾಸ್‌ಗಾಗಿ ಸಂಗ್ರಹಿಸಿದ ಶುಲ್ಕವನ್ನು ಯುವ ರೆಡ್‌ಕ್ರಾಸ್‌ಗೆ ಸಂಬಂಧಿಸದ ಯಾವುದೇ ಉದ್ದೇಶ, ಕಾರ್ಯಕ್ರಮಗಳಿಗೆ ಬಳಸುವಂತಿಲ್ಲ ಮತ್ತು ವರ್ಗಾಯಿಸುವಂತಿಲ್ಲ.

13. ಧೃಡೀಕರಣ ಪತ್ರ:

ಎರಡು ವರ್ಷಗಳ ಸೇವಾವಧಿ ಮತ್ತು ಗೊತ್ತುಪಡಿಸಿದ ಕಾರ್ಯಸೂಚಿ ಮತ್ತು ಗುರಿಗಳನ್ನು ಪೂರೈಸಿದ ಘಟಕದ ಸ್ವಯಂ ಸೇವಕರಿಗೆ ವಿಶ್ವವಿದ್ಯಾಲಯವು ಧೃಡೀಕರಣ ಪತ್ರವನ್ನು ನೀಡುವುದು (ನಮೂನೆ ಲಗತ್ತಿಸಿದೆ).

14. ಕಡತ ಮತ್ತು ದಾಖಲೆಗಳು:

ಯುವ ರೆಡ್‌ಕ್ರಾಸ್ ಘಟಕಗಳು ಈ ಕೆಳಕಂಡ ಕಡತ ಮತ್ತು ದಾಖಲೆಗಳ ನಿರ್ವಹಣೆ ಮಾಡಬೇಕಿದೆ.

ಅ) ಯುವ ರೆಡ್‌ಕ್ರಾಸ್ ಘಟಕ ದಾಖಲೆ.
ಆ) ನಗದು ಪುಸ್ತಕ.
ಇ) ದಾಸ್ತಾನು ಪುಸ್ತಕ.

ಈ) ಸ್ವಯಂ ಸೇವಕರ ಕಾರ್ಯಕ್ರಮ ಓನಜಂ.

**15. ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಪಾತ್ರ:**

ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಶಾಖೆಗಳು ತಮ್ಮ ವ್ಯಾಪ್ತಿಗೆ ಬರುವ ಯುವ ರೆಡ್‌ಕ್ರಾಸ್‌ಗೆ ಅಗತ್ಯವಾದ ಎಲ್ಲಾ ಮಾಹಿತಿ, ಪರಿಣಿತ ಮತ್ತು ಸಲಹಾ ಸೇವೆಗಳನ್ನು ನೀಡುತ್ತವೆ. ಕಾರ್ಯಕ್ರಮಗಳ ಸಮರ್ಪಕ ಮತ್ತು ಸುಲಭ ಅನುಷ್ಠಾನಕ್ಕಾಗಿ ಯುವ ರೆಡ್‌ಕ್ರಾಸ್ ಘಟಕಗಳು ಅದೇ ರೀತಿ ಮೇಲೆ ಕಾಣಿಸಿದ ಕಾರ್ಯಾಲಯಗಳೊಂದಿಗೆ ತಮ್ಮ ಸಂಪರ್ಕವಿರಿಸಿಕೊಳ್ಳುತ್ತವೆ.

**16. ಯುವ ರೆಡ್‌ಕ್ರಾಸ್‌ನ ನೋಡಲ್ ಅಧಿಕಾರಿ:**

ಯುವ ರೆಡ್‌ಕ್ರಾಸ್ ಘಟಕಗಳ ಮಾರ್ಗದರ್ಶನ ಮೇಲ್ವಿಚಾರಣೆ, ಪರಿವೀಕ್ಷಣೆ, ಆಡಳಿತ ಮತ್ತು ನಿಯಂತ್ರಣಕ್ಕಾಗಿ ವಿಶ್ವವಿದ್ಯಾಲಯದ ಮತ್ತು ನಿರ್ದೇಶನಾಲಯದ ಮಟ್ಟದಲ್ಲಿ ಅರೆಕಾಲಿಕ ನೋಡಲ್ ಅಧಿಕಾರಿ ಇರುತ್ತಾರೆ. ಯುವ ರೆಡ್‌ಕ್ರಾಸ್ ನೋಡಲ್ ಅಧಿಕಾರಿ ವಿಶ್ವವಿದ್ಯಾಲಯದ ಕುಲಪತಿ/ನಿರ್ದೇಶನಾಲಯದ ನಿರ್ದೇಶಕರಿಂದ ನೇಮಿಸಲ್ಪಡುತ್ತಾರೆ.

ಗೌರವಧನ, (ಔಟ್ ಆಫ್ ಪಾಕೆಟ್ ಭತ್ಯೆ) ಅರೆಕಾಲಿಕ ಭತ್ಯೆ, ಸಾದಿಲ್ವಾರು ಖರ್ಚಿನ ಬಗ್ಗೆ ನೋಡಲ್ ಕಾರ್ಯಾಲಯದ ಮಾಸಿಕ ವೆಚ್ಚಕ್ಕೆ ಕೆಳಕಂಡ ಗರಿಷ್ಠ ಮಿತಿ ನಿಗದಿಪಡಿಸಿದೆ.

| | | |
|---|---|---|
| ನೋಡಲ್ ಅಧಿಕಾರಿಯ ಔಟ್ ಆಫ್ ಪಾಕೆಟ್ ಭತ್ಯೆ | – | 800/– |
| ನಿಶ್ಚಿತ ಪ್ರಮಾಣ ಭತ್ಯೆ | – | 600/– |
| ಸೆಲ್ ಫೋನ್ ವೆಚ್ಚ | – | 350/– |
| ಲೇಖನ ಸಾಮಗ್ರಿ ವೆಚ್ಚ | – | 500/– |
| ಸಹಾಯಕರ ಅರೆಕಾಲಿಕ ಭತ್ಯೆ | – | 250/– |
| ಒಟ್ಟು | – | 2500/– |

**17. ವಿಶ್ವವಿದ್ಯಾಲಯ/ನಿರ್ದೇಶನಾಲಯ ಮಟ್ಟದ ಸಲಹಾ ಸಮಿತಿ:**

ವಿಶ್ವವಿದ್ಯಾಲಯದ/ನಿರ್ದೇಶನಾಲಯದ ಸ್ತರದಲ್ಲಿ ಯುವ ರೆಡ್‌ಕ್ರಾಸ್ ಸಲಹಾ ಸಮಿತಿ ಅತ್ಯುನ್ನತ ಸಮಿತಿಯಾಗಿದ್ದು, ಯುವ ರೆಡ್‌ಕ್ರಾಸ್‌ನ ಚಟುವಟಿಕೆಗಳ ಮಾರ್ಗದರ್ಶನ, ಪರಿವೀಕ್ಷಣೆ ಮಾಡುತ್ತದೆ.

ಸಲಹಾ ಸಮಿತಿಯ ಅಧ್ಯಕ್ಷರಾಗಿ ಕುಲಪತಿಗಳು ಕೆಳಕಂಡವರನ್ನು ಒಳಗೊಂಡ ಸಮಿತಿಯನ್ನು ನೇಮಿಸುವರು.

| | |
|---|---|
| 1) ಕುಲಪತಿಗಳು / ನಿರ್ದೇಶಕರು | ಅಧ್ಯಕ್ಷ |
| 2) ಕಾಲೇಜು ಶಿಕ್ಷಣ ಪ್ರಾದೇಶಿಕ ನಿರ್ದೇಶಕರು | ಸದಸ್ಯ |
| 3) ಒಬ್ಬ ಪ್ರಾಂಶುಪಾಲರು | ಸದಸ್ಯ |
| 4) ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ರಾಜ್ಯ ಶಾಖೆಯ ಒಬ್ಬ ಪ್ರತಿನಿಧಿ | ಸದಸ್ಯ |
| 5) ಒಬ್ಬ ಯುವ ರೆಡ್‌ಕ್ರಾಸ್ ಕಾರ್ಯಕ್ರಮ ಅಧಿಕಾರಿ | ಸದಸ್ಯ |
| 6) ಯುವ ರೆಡ್‌ಕ್ರಾಸ್‌ನಿಂದ ಒಬ್ಬ ಪುರುಷ | ಸದಸ್ಯ |
| 7) ಒಬ್ಬ ಮಹಿಳಾ ಸ್ವಯಂ ಸೇವಕರು | ಸದಸ್ಯೆ |

೪) ವಿಶ್ವವಿದ್ಯಾಲಯದ / ನಿರ್ದೇಶನಾಲಯದ
ಯುವ ರೆಡ್‌ಕ್ರಾಸ್ ನೋಡಲ್ ಅಧಿಕಾರಿ ಸದಸ್ಯ ಕಾರ್ಯದರ್ಶಿ

ಸಮಿತಿಯು ವರ್ಷದಲ್ಲಿ ಕನಿಷ್ಠ ಎರಡು ಸಲ ಸಭೆ ಸೇರಿ ಕಾರ್ಯಕ್ರಮ ನಿಯೋಜನೆ ಮತ್ತು ಮೌಲ್ಯಮಾಪನ ನಡೆಸುವುದು.

**18. ರಾಜ್ಯಮಟ್ಟದ ಯುವ ರೆಡ್‌ಕ್ರಾಸ್ ಸಲಹಾ ಸಮಿತಿ:**

ಬಹುತೇಕ ಇಲಾಖೆಗಳು ತಮ್ಮ ಅಭಿವೃದ್ಧಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ವ್ಯೂಹಾತ್ಮಕವಾಗಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಯುವ ಅಂಶಗಳನ್ನು ಅಳವಡಿಸಿಕೊಂಡಿರುತ್ತವೆ. ಈ ಇಲಾಖೆಗಳೊಂದಿಗೆ ಸಂಪರ್ಕ ಮತ್ತು ಸಮನ್ವಯ ಸಾಧಿಸುವ ದೃಷ್ಟಿಯಿಂದ ರಾಜ್ಯ ಸರಕಾರ ತನಗೆ ಸಮರ್ಪಕವೆನಿಸುವ ಸಮಿತಿ ರಚಿಸಬಹುದಾಗಿದೆ.

****************

ಅನುಸೂಚಿ–ಬಿ

# ಕಾರ್ಯಕ್ರಮದ ಮಾರ್ಗದರ್ಶಿ ಸೂತ್ರಗಳು

1) ಸ್ವಯಂ ಸೇವಕರ ತರಬೇತಿ:

ಆಂತರಿಕ ತಂಡದ ಸ್ವಯಂಸೇವಕರ (ಕೋರ್ ಗ್ರೂಪ್ ವಾಲಂಟಿಯರ್ಸ್) ಆಯ್ಕೆಯಾಗಿ ಯುವ ರೆಡ್‌ಕ್ರಾಸ್ ಘಟಕ ಸ್ಥಾಪನೆಯಾದ ಕೂಡಲೇ ಸ್ವಯಂಸೇವಕರಿಗೆ ಅವರ ಪಾತ್ರ ಮತ್ತು ಹೊಣೆಗಾರಿಕೆಯನ್ನು ಮನವರಿಕೆ ಮಾಡಿಕೊಡಲು ಪ್ರಶಿಕ್ಷಣ ನೀಡಬೇಕು. ತಂಡದ ಸದಸ್ಯರಾಗಿ ಕಾರ್ಯನಿರ್ವಹಿಸಲು ಅವಶ್ಯಕವಿರುವ ಅರಿವು, ಮನೋಭಾವ, ಕೌಶಲ್ಯ ಇನ್ನಿತರ ಸಾಮರ್ಥ್ಯಗಳನ್ನು ಬೆಳೆಸುವ ಮೂಲಕ ಅವರ ಸಬಲೀಕರಣಕ್ಕೆ ನೆರವಾಗಬೇಕು. ಇದಕ್ಕೆ ಎರಡು ದಿನಗಳ ಅವಶ್ಯಕತೆಯಿದ್ದು ವಾರಾಂತ್ಯದಲ್ಲಿ ನಡೆಸಬಹುದು.

2) ಪ್ರಥಮ ಚಿಕಿತ್ಸೆ ತರಬೇತಿ:

ಅನುಬಂಧ-1 ರಲ್ಲಿ ತಿಳಿಸಿರುವಂತೆ ಪ್ರಥಮ ಚಿಕಿತ್ಸೆ ತರಬೇತಿಯನ್ನು ಪಡೆಯುವುದು ಎಲ್ಲಾ ಕೋರ್‌ಗ್ರೂಪ್ ಸ್ವಯಂಸೇವಕರಿಗೆ ಕಡ್ಡಾಯವಾಗಿದೆ. ಕಾಲೇಜಿನಲ್ಲಿರುವ ಆಸಕ್ತ ವಿದ್ಯಾರ್ಥಿಗಳಿಗೆ ಯುವ ರೆಡ್‌ಕ್ರಾಸ್ ಈ ತರಬೇತಿಯನ್ನು ವ್ಯವಸ್ಥೆಗೊಳಿಸಬಹುದು. ಭಾರತೀಯ ರೆಡ್‌ಕ್ರಾಸ್ ಒಂದು ಅನುಮೋದಿತ, ಪ್ರಮಾಣೀಕೃತ ತರಬೇತಿ ಸಂಸ್ಥೆಯಾಗಿದ್ದು ಅದು ನೀಡುವ ಪ್ರಮಾಣಪತ್ರ ವಾಹನ ಚಾಲನೆಗೆ ಅನುಮತಿ ಪಡೆಯಲು ಮಾನ್ಯ ಎಂದು ಪರಿಗಣಿಸಲಾಗಿದೆ.

3) ವಿಪತ್ತು ನಿರ್ವಹಣಾ ಹಾಗೂ ಪೂರ್ವ ಸಿದ್ಧತಾ ತರಬೇತಿ:

ವಿಪತ್ತು ನಿರ್ವಹಣೆಯ ಅವಶ್ಯ ಅಂಶಗಳಾದ ಮುನ್ಸೂಚನೆ, ವಿಪತ್ತಿಗೆ ಈಡಾಗುವಿಕೆ, ಮರುಮಾರ್ಪಾಟು, ವ್ಯವಸ್ಥಾಪನ ಉಪಾಯ, ಪಾರುಮಾಡುವಿಕೆ, ಪರಿಹಾರ, ಪುನರ್ವಸತಿ, ತುರ್ತು ಚಿಕಿತ್ಸೆ, ಆರೋಗ್ಯ ರಕ್ಷಣೆ ಮುಂತಾದವುಗಳ ತರಬೇತಿಯನ್ನು ಸ್ವಯಂಸೇವಕರಿಗೆ ನೀಡುವುದು ಅಪೇಕ್ಷಣೀಯ. ವಿವರಗಳಿಗೆ ಅನುಬಂಧ-2ನ್ನು ನೋಡುವುದು.

4) ಕನಿಷ್ಠ ಪರಿಣತಿಗಳ ತರಬೇತಿ:

ಕಲಿಕೆಯು ಪಠ್ಯ ಮತ್ತು ಪಠ್ಯೇತರ ಎರಡೂ ಸಂದರ್ಭಗಳಲ್ಲೂ ನಡೆಯುತ್ತಿರುತ್ತದೆ. ಉದ್ಯೋಗದಲ್ಲಿ, ನಾಗರೀಕ ಹೊಣೆಗಾರಿಕೆಯಲ್ಲಿ, ದೈನಂದಿನ ಬದುಕಿನ ವ್ಯವಹಾರಗಳಲ್ಲಿ ಅತೀ ಅಗತ್ಯವೆನಿಸುವ ಕೆಲವು ಕನಿಷ್ಠ ಸಾಮರ್ಥ್ಯ, ಕೌಶಲ್ಯ ಅಥವಾ ಪರಿಣತಿಯನ್ನು ಜಾಗತಿಕವಾಗಿ ಗುರುತಿಸಲಾಗಿದ್ದು, ಅವುಗಳನ್ನು ಎಲ್ಲ ವಿದ್ಯಾರ್ಥಿಗಳೂ ಮೈಗೂಡಿಸಿಕೊಳ್ಳಬೇಕಿದೆ. ವಿವರಗಳಿಗೆ ಅನುಬಂಧ-3ನ್ನು ಗಮನಿಸಿ.

5) ರಕ್ತದಾನಿಗಳ ಪ್ರೇರೇಪಣೆ:

ಯುವ ರೆಡ್‌ಕ್ರಾಸ್, ಎನ್.ಸಿ.ಸಿ., ಎನ್.ಎಸ್.ಎಸ್., ರೋವರ್ಸ್, ರೇಂಜರ್ಸ್, ಕ್ರೀಡಾಪಟುಗಳು, ರೆಡ್ ರಿಬ್ಬನ್ ಕ್ಲಬ್‌ಗಳಲ್ಲಿರುವ ಸದಸ್ಯರನ್ನು ಪ್ರೇರೇಪಿಸಿ ಕನಿಷ್ಠ ವರ್ಷಕ್ಕೆ ಒಂದು ಸಲ ರಕ್ತದಾನ ಶಿಬಿರ ಏರ್ಪಡಿಸುವುದು ಅಗತ್ಯವಾಗಿದೆ.

ಯುವ ರೆಡ್‌ಕ್ರಾಸ್‌ನ ಸ್ವಯಂಸೇವಕರಲ್ಲಿ ಕನಿಷ್ಠ 33% ತಮ್ಮ ಎರಡು ವರ್ಷದ ಸ್ವಯಂಸೇವಾ ಅವಧಿಯಲ್ಲಿ ಒಮ್ಮೆಯಾದರೂ ರಕ್ತದಾನ ಮಾಡಲೇಬೇಕಿದೆ. ವಿವರಗಳಿಗೆ ಅನುಬಂಧ-4ನ್ನು ಗಮನಿಸಿ.

**6) ಪ್ರಾಮುಖ್ಯ ದಿನಗಳ ಆಚರಣೆ:**

ಸಭೆ ಹಾಗೂ ಪ್ರದರ್ಶನಗಳನ್ನು ಸಂಘಟಿಸುವ ಮೂಲಕ ಈ ಕೆಳಕಂಡ ದಿನಗಳ ಆಚರಣೆ ಯುವ ರೆಡ್‌ಕ್ರಾಸ್ ಘಟಕದ ಕನಿಷ್ಠ ಕಡ್ಡಾಯ ಕಾರ್ಯಕ್ರಮವಾಗಿದೆ.

| | |
|---|---|
| ಜನವರಿ 12 | ರಾಷ್ಟ್ರೀಯ ಯುವ ದಿನ |
| ಏಪ್ರಿಲ್ 07 | ಜಾಗತಿಕ ಆರೋಗ್ಯ ದಿನ |
| ಜೂನ್ 05 | ವಿಶ್ವ ಪರಿಸರ ದಿನ |
| ಆಗಸ್ಟ್ 12 | ಜಿನೀವಾ ಒಪ್ಪಂದ ದಿನ |
| ಅಕ್ಟೋಬರ್ 01 | ಸ್ವಯಂ ಪ್ರೇರಿತ ರಕ್ತದಾನ ದಿನ |
| ಅಕ್ಟೋಬರ್ 30 | ಜೀನ್ ಹೆನ್ರಿ ಡುನಂಟ್ ಸ್ಮರಣ ದಿನ |
| ಡಿಸೆಂಬರ್ 01 | ಜಾಗತಿಕ ಏಡ್ಸ್ ದಿನ |
| ಡಿಸೆಂಬರ್ 05 | ಅಂತರಾಷ್ಟ್ರೀಯ ಸ್ವಯಂಸೇವಕರ ದಿನ |

**7) ಯುವ ರೆಡ್‌ಕ್ರಾಸ್ ಘಟಕ ದಾಖಲೆ:**

ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಕರ್ನಾಟಕ ರಾಜ್ಯ ಶಾಖೆ ಈ ದಾಖಲಾತಿ ಪುಸ್ತಕವನ್ನು ಎಲ್ಲ ಯುವ ರೆಡ್‌ಕ್ರಾಸ್ ಘಟಕಗಳಗೂ ದಾಖಲೆಗಳ ನಿರ್ವಹಣೆಗಾಗಿ ನೀಡುತ್ತದೆ ಇದು ಘಟಕದ ಸಮಗ್ರ ಮಾಹಿತಿ ಹೊಂದಿದ್ದು ಕೆಳಕಂಡ ಪುಟಗಳಿರುತ್ತವೆ.

| ಕ್ರಸಂ. | ವಿವರ | ಪುಟಗಳು |
|---|---|---|
| 1. | ಯುವ ರೆಡ್‌ಕ್ರಾಸ್ ಘಟಕದ ಸ್ವಯಂ ಸೇವಕರ ವಿವರ | 01 – 04 |
| 2. | ಯುವ ರೆಡ್‌ಕ್ರಾಸ್ ವ್ಯವಸ್ಥಾಪನ ಸಮಿತಿ ಮತ್ತು ಸಲಹಾ ಸಮಿತಿ ಸದಸ್ಯರ ವಿವರ | 05 |
| 3. | ಸಲಹಾ ಸಮಿತಿ ಸಭಾ ನಡವಳಿಕೆಗಳು | 06 – 07 |
| 4. | ವ್ಯವಸ್ಥಾಪನ ಸಮಿತಿ ಸಭಾ ನಡುವಳಿಕೆಗಳು | 08 – 09 |
| 5. | ಯುವ ರೆಡ್‌ಕ್ರಾಸ್ ಆಯುವ್ಯಯ | 10 |
| 6. | ಸ್ವಯಂ ಸೇವಕರ ಮಾರ್ಗದರ್ಶಿ ತರಬೇತಿ ವರದಿ | 11 – 12 |
| 7. | ಪ್ರಥಮ ಚಿಕಿತ್ಸೆ ತರಬೇತಿ ವರದಿ | 13 – 14 |
| 8. | ವಿಪತ್ತು ನಿರ್ವಹಣೆ ತರಬೇತಿ ವರದಿ | 15 – 16 |
| 9. | ಕೌಶಲ್ಯ ಮತ್ತು ಪರಿಣತಿ ತರಬೇತಿ ವರದಿ | 17 – 18 |
| 10. | ರಕ್ತದಾನ ನೀಡಿದ ಸ್ವಯಂ ಸೇವಕರ ವಿವರ | 19 – 20 |
| 11. | ರಕ್ತದಾನ ನೀಡಿದ ಇನ್ನಿತರರ ವಿವರ | 21 – 23 |
| 12. | ದಿವಸಗಳ ಆಚರಣೆ ವರದಿ | 24 – 28 |
| 13. | ದಾಸ್ತಾನು ಪಟ್ಟಿ | 29 – 31 |
| 14. | ಕೈಗೊಂಡ ಅಥವಾ ಸಂಪೂರ್ಣಗೊಂಡ ಪ್ರಕಲ್ಪಗಳು | 32 – 35 |

| | | |
|---|---|---|
| 15. | ನವೀನ ಕಾರ್ಯಕ್ರಮಗಳು ಮತ್ತು ಅನುಷ್ಠಾನ ವಿವರ | 36 – 37 |
| 16. | ಕಾಲೇಜು ಆವರಣಗೊಳಗಿನ ಕಾರ್ಯಕ್ರಮ | 38 – 39 |
| 17. | ಕಾಲೇಜು ಹೊರಗಿನ ವಿಸ್ತರಣ ಕಾರ್ಯಕ್ರಮಗಳು | 40 – 41 |
| 18. | ಹೊರ ಕಾರ್ಯಕ್ರಮಗಳಿಗೆ ಸ್ವಯಂಸೇವಕರ ನಿಯೋಜನೆ | 42 – 43 |
| 19. | ಸ್ವಯಂಸೇವಕರ ಕಾರ್ಯನಿರ್ವಹಣೆ | 44 – 45 |
| 20. | ಸಂದರ್ಶಕರ ಅಭಿಪ್ರಾಯ | 46 – 47 |
| 21. | ಪತ್ರಿಕಾ ಪ್ರಕಟಣೆಗಳು | 48 – 49 |
| 22. | ಸ್ವಯಂಸೇವಕರ ಶೈಕ್ಷಣಿಕ ಸಾಧನೆ | 50 |


8) <u>ಸ್ಥಾನಬದ್ಧ ಸ್ವಯಂ ತರಬೇತಿ:</u>

ಎರಡು ವರ್ಷಗಳ ಸ್ವಯಂ ಸೇವಾವಧಿಯನ್ನು ಮುಗಿಸಿದವರಿಗೆ ಇದೊಂದು ಐಚ್ಛಿಕ ಕಾರ್ಯಕ್ರಮ. ಇದನ್ನು ಯಾವುದೇ ಎರಡು ಸೆಮಿಸ್ಟರ್‌ಗಳ ಮಧ್ಯಂತರ ಬಿಡುವಿನಲ್ಲಿ ಕೈಗೊಳ್ಳಬಹುದು.

ಈ ಎರಡು ವರ್ಷಗಳಲ್ಲಿ ಸೂಕ್ಷ್ಮಗ್ರಾಹಿತ್ವವನ್ನು ಹೊಂದಿರುವ ಸ್ವಯಂಸೇವಕರ ಜ್ಞಾನವನ್ನು ಬೇಡಿಕೆ ಇರುವ ಕ್ಷೇತ್ರಗಳಲ್ಲಿ ಬಳಸಿಕೊಳ್ಳುವುದು ಮತ್ತು ಸಮುದಾಯದೊಂದಿಗೆ ಮುಖಾಮುಖಿ ಅನುಭವ ಬೆಳೆಸಿಕೊಳ್ಳುವುದೇ ಇದರ ಉದ್ದೇಶವಾಗಿದೆ. ಇದು ಏಳು ದಿನಗಳ ಸ್ವಯಂ ತರಬೇತಿ ಆಗಿದ್ದು, ವಾರಾಂತ್ಯದಲ್ಲಿ ಅಥವಾ ರಜೆ ದಿನಗಳಲ್ಲಿ ಒಂದು ತಿಂಗಳ ಅವಧಿಯೊಳಗೆ ಮುಗಿಸಬಹುದಾಗಿದೆ.

<u>ಸಂಸ್ಥೆಗಳ ಆಯ್ಕೆ:</u>

ಸ್ಥಾನಬದ್ಧ ಸ್ವಯಂ ತರಬೇತಿಯ ಸಂಸ್ಥೆಯ ಆಯ್ಕೆಯನ್ನು ಸ್ವಯಂಸೇವಕರಾಗಲೀ, ಅಥವಾ ಘಟಕವಾಗಲೀ ಕಾರ್ಯಕ್ರಮ ಅಧಿಕಾರಿಯ ಅನುಮತಿ ಮೇರೆಗೆ ಮಾಡಬಹುದು.

<u>ಕೆಲವು ಮಾದರಿ ಸಂಸ್ಥೆಗಳು:</u>

ಅ) ಆಸ್ಪತ್ರೆ, ಚಿಕಿತ್ಸಾಲಯ, ಔಷಧಾಲಯ, ಶುಶ್ರೂಷಾ ಕೇಂದ್ರ ಇತ್ಯಾದಿ.
ಆ) ರಕ್ತನಿಧಿ, ಪೆಥಾಲಜಿ ಪ್ರಯೋಗಶಾಲೆ.
ಇ) ಅಗ್ನಿಶಾಮಕ ಕೇಂದ್ರ, ಸಂಚಾರ ನಿಯಂತ್ರಣ, ರಸ್ತೆ ಸುರಕ್ಷತೆ.
ಈ) ವೃದ್ಧಾಶ್ರಮ, ಪುನರ್ವಸತಿ ಪರಿಹಾರ ಕೇಂದ್ರ, ಭಿಕ್ಷುಕ, ನಿರಾಶ್ರಿತರ ಕೇಂದ್ರ.
ಉ) ರೈಲ್ವೆ, ಬಸ್ ಅಥವಾ ಯಾವುದೇ ನಾಗರಿಕ ಸೌಲಭ್ಯ ಕೇಂದ್ರದಲ್ಲಿ ಸಹಾಯ ಕಕ್ಷೆ.

***************

## ಪ್ರಥಮ ಚಿಕಿತ್ಸೆಯ ಸಂಕ್ಷಿಪ್ತ ಇತಿಹಾಸ:

ಪ್ರಥಮ ಚಿಕಿತ್ಸೆಯ ಇತಿಹಾಸ ನಾವು ಜಗತ್ತಿನ ಯಾವ ಭಾಗವನ್ನು ಉದ್ದೇಶಿಸಿ ಹೇಳುತ್ತೇವೆ ಎಂಬುದರ ಮೇಲೆ ಬದಲಾಗುತ್ತದೆ.

ಹನ್ನೊಂದನೆ ಶತಮಾನದ ಯುರೋಪಿನಲ್ಲಿ ಯುದ್ದದಲ್ಲಿ ಗಾಯಗೊಂಡವರನ್ನು ಉಪಚರಿಸುವ ಸಲುವಾಗಿ ಸೈಂಟ್ ಜಾನ್ಸ್ ದಳ ಸ್ಥಾಪನೆಯಾಯಿತು.

ಇದು ಸಾಮಾನ್ಯ ಪ್ರಥಮ ಚಿಕಿತ್ಸೆ ನೀಡಲು ಜನಸಾಮಾನ್ಯರನ್ನು ತಯಾರು ಮಾಡುವುದೇ ಆಗಿತ್ತು. ಈ ಅವಧಿಯಲ್ಲೇ 'ನೈಟ್ಸ್ ಹಾಸ್ಪಿಟಲರ್ಸ್' ಯಾತ್ರಿಗಳ ಮತ್ತು ನೈಟ್ಸ್‌ಗಳ ಆರೈಕೆಯ ವ್ಯವಸ್ಥೆ ಮಾಡುತ್ತಿದ್ದವು. ಕೆಲವು ನೈಟ್ಸ್‌ಗಳಿಗೆ ಯುದ್ದರಂಗದಲ್ಲಿ ಗಾಯಗೊಂಡವರಿಗೆ ಚಿಕಿತ್ಸೆ ನೀಡುವ ತರಬೇತಿಯನ್ನು ನೀಡಲಾಗುತ್ತಿತ್ತು.

ಮಧ್ಯಯುಗದ ಯುರೋಪಿನಲ್ಲಿ 19ನೇ ಶತಮಾನದ ಉತ್ತರಾರ್ಧದವರೆಗೂ ಪ್ರಥಮ ಚಿಕಿತ್ಸೆ ಮುನ್ನೆಲೆಗೆ ಬಂದಿರಲಿಲ್ಲ. 1859 ರಲ್ಲಿ ಸ್ವಿಸ್ ಉದ್ಯಮಿ ಹೆನ್ರಿ ಡುನಂತ್ ಇಟಲಿಯ ಸಾಲ್ಪರಿನೋನಲ್ಲಿ ನಡೆದ ಯುದ್ಧದ ಗಾಯಾಳುಗಳ ಆರೈಕೆಗಾಗಿ ಸ್ಥಳೀಯ ನಿವಾಸಿಗಳನ್ನು ಸಂಘಟಿಸಿ ತರಬೇತಿ ನೀಡಿದ. 1863 ರಲ್ಲಿ ಜಿನೀವಾ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ 4 ದೇಶಗಳ ಪ್ರತಿನಿಧಿಗಳು ಸೇರಿ ಈ ಉದ್ದೇಶಕ್ಕಾಗಿ ಸಂಸ್ಥೆಯೊಂದನ್ನು ಸ್ಥಾಪಿಸಿ ಅದೇ ಮುಂದೆ 'ರೆಡ್‌ಕ್ರಾಸ್' ಆಯಿತು. ಈ ಸಭೆಯಲ್ಲಿಯೇ ಆಧುನಿಕ ಅರ್ಥದಲ್ಲಿ 'ಪ್ರಥಮ ಚಿಕಿತ್ಸೆ' ಎನ್ನುವ ಪದ ಪ್ರಯೋಗಿಸಲಾಯಿತು. ರೆಡ್ ಕ್ರಾಸ್ ನ ಪ್ರಾರಂಭಿಕ ಉದ್ದೇಶ ಯುದ್ದದಲ್ಲಿ ಗಾಯಗೊಂಡ, ಅಸ್ವಸ್ಥಗೊಂಡ ಸೈನಿಕರ ಆರೈಕೆ ಮಾಡುವುದೇ ಆಗಿತ್ತು. ಕೈಗಾರಿಕಾ ಕ್ರಾಂತಿಯ ದಿನಗಳಲ್ಲಿ ಬ್ರಿಟನ್ ಅನೇಕ ನಾಗರೀಕ ತುರ್ತು ಚಿಕಿತ್ಸಾ ದಳಗಳನ್ನು ಸ್ಥಾಪಿಸಿ ರೈಲ್ವೆ ಮತ್ತು ಪೋಲಿಸರಿಗೆ ತುರ್ತು ಚಿಕಿತ್ಸೆಯ ಅಗತ್ಯ ಪೂರೈಸುತ್ತಿತ್ತು.

1877 ರಲ್ಲಿ ಇಂಗ್ಲೆಂಡ್‌ನಲ್ಲಿ ಸೈಂಟ್ ಜಾನ್ಸ್ ಆಂಬ್ಯುಲೆನ್ಸ್ ಸ್ಥಾಪನೆಯಾಯಿತು. ಇದು ಪ್ರಥಮ ಚಿಕಿತ್ಸೆ ತರಬೇತಿ ನೀಡುವ ನೈಟ್ಸ್ ಹಾಸ್ಪಿಟಲರ್ಸ್ ತತ್ವದ ಮೇಲೆ ನಡೆಸಲಾಗುತ್ತಿತ್ತು. ಹಲವಾರು ಸಂಸ್ಥೆಗಳು ಬಹುಬೇಗನೆ ಸೈಂಟ್ ಜಾನ್ಸ್ ಆಂಬ್ಯುಲೆನ್ಸ್ ಬಳಗ ಸೇರಿಕೊಂಡವು. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಎಲ್ಲ ಕಡೆಯೂ ಪ್ರಥಮ ಚಿಕಿತ್ಸೆ ತರಬೇತಿ ಪ್ರಾರಂಭವಾಯಿತು. ವೃತ್ತಿನಿರತ ವೈದ್ಯರು ಚಿಕಿತ್ಸೆ ಪ್ರಾರಂಭಿಸುವ ಮೊದಲು ಗಾಯಾಳು ಅಥವಾ ರೋಗಿಗೆ ನೀಡಲಾಗುವ ಆರೈಕೆ – ಚಿಕಿತ್ಸೆಯೇ ಪ್ರಥಮ ಚಿಕಿತ್ಸೆ ಅಥವಾ ತುರ್ತು ಚಿಕಿತ್ಸೆ ಎಂದು ಕರೆಯಲ್ಪಡುತ್ತದೆ. ಕೆಲವು ಸಾಧಾರಣ ಕಾಯಿಲೆಗಳು ಅಥವಾ ಗಾಯಗಳಿಗೆ ಪ್ರಥಮ ಚಿಕಿತ್ಸೆಯಷ್ಟೇ ಸಾಕಾಗುತ್ತದೆ.

ಅಪಘಾತ ಅಥವಾ ಪ್ರಾಣಾಂತಿಕ ಗಾಯಗಳಿಂದಾಗಿ ಪ್ರಪಂಚದಲ್ಲಿ ಪ್ರತಿ ವರ್ಷ ಲಕ್ಷಾಂತರ ಜನ ಅಸು ನೀಗುತ್ತಾರೆ. ಸ್ಥಳದಲ್ಲಿಯೇ ತುರ್ತು ಚಿಕಿತ್ಸೆ ತಕ್ಷಣವೇ ದೊರೆತರೇ ಇಂಥಹ ಹಲವಾರು ಸಾವುಗಳನ್ನು ತಡೆಗಟ್ಟಬಹುದು.

ಪೆಟ್ಟಿ ಉಪಕರಣಗಳ ಸಹಾಯವಿಲ್ಲದೇ ಜೀವ ಉಳಿಸಬಹುದಾದ ಕೆಲವು ಸರಳ ತಂತ್ರಗಳೇ ಪ್ರಥಮ ಚಿಕಿತ್ಸೆಯ ಒಂದು ಅಂಶ. ಬಹುತೇಕ ಜನರನ್ನು ಇದರಲ್ಲಿ ತರಬೇತುಗೊಳಿಸಬಹುದು. ಪ್ರಥಮ ಚಿಕಿತ್ಸೆ ಜನರ ಆರೈಕೆಗೆ ಸಂಬಂಧಿಸಿದ್ದರೂ, ಜಾನುವಾರುಗಳಿಗೂ ಇದನ್ನು ವಿಸ್ತರಿಸಬಹುದಾಗಿದೆ. ರೋಗಿಯ ಸ್ಥಿತಿ ಬಿಗಡಾಯಿಸದಂತೆ ನೋಡಿಕೊಳ್ಳುವುದು, ಸುಧಾರಿಸಿಕೊಳ್ಳಲು ಸಹಾಯ ಮಾಡುವುದು ಮತ್ತು ಜೀವರಕ್ಷಣೆ – ತುರ್ತುಚಿಕಿತ್ಸೆಯ ಪ್ರಧಾನ ಅಂಶಗಳು. ತಾಂತ್ರಿಕವಾಗಿ ಇದನ್ನು ವೈದ್ಯಕೀಯ ಚಿಕಿತ್ಸೆ ಎಂದು . ವಿಂಗಡಿಸಿಲ್ಲವಾದ್ದರಿಂದ, ನುರಿತ ವೃತ್ತಿನಿರತ ವೈದ್ಯರ ಚಿಕಿತ್ಸೆಯೊಂದಿಗೆ ಇದನ್ನು ಹೋಲಿಸಲಾಗದು. ತುರ್ತು ಚಿಕಿತ್ಸೆ ಸಾಮಾನ್ಯ ಜ್ಞಾನ ಮತ್ತು ಕೆಲವು ಸರಳ ಕ್ರಮಗಳ ಒಂದು ಪದ್ಧತಿ.

<u>ಪ್ರಥಮ ಚಿಕಿತ್ಸೆಯ ಉದ್ದೇಶಗಳು:</u>

ಪ್ರಥಮ ಚಿಕಿತ್ಸಕರ, ಗಾಯಾಳುಗಳ ಮತ್ತು ಘಟನಾ ಸ್ಥಳದ ಸಮೀಪದಲ್ಲಿರುವವರ ಜೀವ ರಕ್ಷಣೆ, ಹೆಚ್ಚಿನ ಅಪಾಯಕ್ಕೆ ತಡೆ, ಸೂಕ್ತ ಚಿಕಿತ್ಸೆ ದೊರೆಯುವವರೆಗೂ ರೋಗಿಯ ಸ್ಥಿತಿ ಬಿಗಡಾಯಿಸದಂತೆ ಗಮನವಹಿಸುವುದು, ಅಪಘಾತದ ಸ್ಥಳದಿಂದ ಸುರಕ್ಷಿತ ಸ್ಥಳಕ್ಕೆ ರೋಗಿಯ ರವಾನೆ, ಅವಶ್ಯವಿರುವ ಪ್ರಥಮ ಚಿಕಿತ್ಸೆ, ದೇಹದ ಉಷ್ಣಾಂಶ ಕಡಿಮೆಯಾಗದಂತೆ, ಒದ್ದೆಯಾಗದಂತೆ ನೋಡಿಕೊಳ್ಳುವುದು, ಗಾಯದಿಂದ ರಕ್ತಸ್ರಾವವಾಗದಂತೆ ಒತ್ತಿಹಿಡಿಯುವುದು – ಇವು ತುರ್ತು ಚಿಕಿತ್ಸಕರು ಗಮನಿಸಬೇಕಾದ ಸಂಗತಿಗಳು.

<u>ಗುಣಹೊಂದಲು ಸಹಾಯ:</u>

ರೋಗಿ ಅಥವಾ ಗಾಯಾಳು ಚೇತರಿಸಿಕೊಳ್ಳಲು ಸಹಾಯವಾಗುವಂತೆ ಪ್ಲಾಸ್ಟರ್ ಅಥವಾ ಬ್ಯಾಂಡೇಜ್ ಬಳಸುವುದು, ಉತ್ತಮ ಗಾಳಿ, ಉಸಿರಾಡುವಿಕೆ, ರಕ್ತಪರಿಚಲನೆ ಕಾಯ್ದುಕೊಳ್ಳುವುದು ಮುಂತಾದವು.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ರಾಜ್ಯ ಶಾಖೆ ಜಿಲ್ಲಾ ಮತ್ತು ತಾಲ್ಲೂಕು ಶಾಖೆಗಳು ನಿಯಮಿತವಾಗಿ ಪ್ರಥಮ ಚಿಕಿತ್ಸೆ ತರಗತಿ ಮತ್ತು ಪರೀಕ್ಷೆಗಳನ್ನು ನಡೆಸುತ್ತವೆ.

***************

## ಅನುಬಂಧ –2

ವಿಪತ್ತು ನಿರ್ವಹಣೆಯಲ್ಲಿ ತರಬೇತಿ:

ಇತ್ತೀಚಿನ ದಿನಗಳಲ್ಲಿ ಪದೇಪದೇ ಸಂಭವಿಸುತ್ತಿರುವ ಮತ್ತು ಹೆಚ್ಚು ತೀವ್ರತೆಯಿಂದ ಕೂಡಿದ ಪ್ರಾಕೃತಿಕ ಮತ್ತು ಮಾನವ ನಿರ್ಮಿತ ವಿಪತ್ತುಗಳು ಸರಕಾರದ ಮತ್ತು ಸರಕಾರೇತರ ಸಂಸ್ಥೆಗಳಲ್ಲಿ ಕಳವಳ ಮೂಡಿಸಿದೆ. ಪರಿಹಾರ ಮತ್ತು ಪುನರ್ವಸತಿಗಾಗಿ ಖರ್ಚು ಮಾಡಬೇಕಾಗಿ ಬರುವ ಕೋಟ್ಯಾಂತರ ರೂ.ಗಳನ್ನು ಅಭಿವೃದ್ಧಿಗಾಗಿ ವಿನಿಯೋಗಿಸಬಹುದಾಗಿದ್ದು, ಆಸ್ತಿ, ಜೀವ, ಪರಿಸರ ನಾಶಕ್ಕೆ ಕಾರಣವಾಗಿದ್ದು ಕಳವಳ ಉಂಟುಮಾಡಿದೆ.

ವಿಪತ್ತುಗಳಿಗೆ ಈಡಾಗುವವರ ಸಂಖ್ಯೆ ಕರ್ನಾಟಕದಲ್ಲಿ ಹೆಚ್ಚುತ್ತಿದೆ. ರಾಜ್ಯವು ಭೌಗೋಳಿಕವಾಗಿ ಪಶ್ಚಿಮ ಕರಾವಳಿಗೆ ಹೊಂದಿಕೊಂಡಿದ್ದು ಚಂಡಮಾರುತ, ಬಿರುಗಾಳಿ, ಮಣ್ಣಿನ ಸವಕಳಿಗೆ ತುತ್ತಾಗುತ್ತದೆ. ರಾಜ್ಯದ ಬಹುದೊಡ್ಡ ಭೂಪ್ರದೇಶ ಕೃಷ್ಣ – ಕಾವೇರಿ – ಗೋದಾವರಿ ಜಲಾನಯನ ವ್ಯಾಪ್ತಿಯಲ್ಲಿ ಪ್ರವಾಹದ ಭೀತಿಯಲ್ಲಿರುತ್ತದೆ. ಪಶ್ಚಿಮ ಘಟ್ಟದ ಉದ್ದಕ್ಕೂ ಮಳೆಗಾಲದಲ್ಲಿ ಭೂ ಕುಸಿತದ ಸಮಸ್ಯೆ ಎದುರಿಸಬೇಕಾಗುತ್ತದೆ. ಬರ ರಾಜ್ಯದ ಮತ್ತೊಂದು ಪ್ರಮುಖ ನೈಸರ್ಗಿಕ ಸಮಸ್ಯೆಯಾಗಿದೆ. ಅಂತರ್ಜಲ ಮಟ್ಟ ಕುಸಿಯುತ್ತಿದ್ದು, ಫ್ಲೋರೈಡ್, ನೈಟ್ರೇಟ್ ಮತ್ತು ಲವಣಗಳಿಂದ ಕಲುಷಿತವಾಗುತ್ತಿದೆ.

ನೈಸರ್ಗಿಕ ಪ್ರಕೋಪಕ್ಕೆ ತುತ್ತಾಗುವ ಸಂದರ್ಭಗಳು ಜಾಸ್ತಿಯಾಗುತ್ತಿದ್ದರೂ ಮಾನವ ಕ್ರಿಯೆಗಳು ಇದನ್ನು ಮತ್ತಷ್ಟು ಜಟಿಲಗೊಳಿಸುತ್ತವೆ.

ವಾಯುಗುಣ ಬದಲಾವಣೆ ನೈಸರ್ಗಿಕ ಪ್ರಕೋಪವನ್ನು ಮತ್ತಷ್ಟು ಹೆಚ್ಚಿಸಬಹುದು. ಇದು ವಿಪತ್ತಿನ ಪ್ರಮಾಣ ಮತ್ತು ಆವರ್ತನ ಕಾಲವನ್ನು ಹೆಚ್ಚಿಸಿ ಇದರ ನಿರ್ವಹಣೆಗಾಗಿ ನಾವು ನಮ್ಮ ಹಿಂದಿನ ಅನುಭವಗಳಿಂದ ಮಾಡಿಕೊಂಡಿದ್ದ ವಿಪತ್ತು ನಿರ್ವಹಣೆಯ ಯೋಜನೆ ಮತ್ತು ತಂತ್ರಗಳನ್ನು ನಿಷ್ಫಲಗೊಳಿಸುತ್ತವೆ. ಜಾಗತಿಕ ತಾಪಮಾನ ಹೆಚ್ಚಿದಂತೆ ಬರ, ಪ್ರವಾಹ, ಚಂಡ ಮಾರುತ, ಬಿರುಗಾಳಿ ಪ್ರಸಂಗಗಳು ಹೆಚ್ಚಾಗಬಹುದು. ಈ ನೈಸರ್ಗಿಕ ವಿಪತ್ತುಗಳ ಜೊತೆಗೆ ಕೀಟಜನ್ಯ ರೋಗಗಳಾದ ಚಿಕನ್ ಗುನ್ಯಾ, ಡೆಂಗ್ಯೂ ಉಲ್ಬಣಿಸಬಹುದು. ನಗರಗಳ ಅನಿರ್ಬಂಧಿತ ಹರಡುವಿಕೆ, ಆರೋಗ್ಯ ವ್ಯವಸ್ಥೆಯ ಕೊರತೆ, ಅನಾರೋಗ್ಯಕರ ಜೀವನ ಪರಿಸ್ಥಿತಿ ಸಮಸ್ಯೆಯನ್ನು ವೃದ್ಧಿಸಬಲ್ಲವು.

ಕೈಗಾರಿಕಾಭಿವೃದ್ಧಿಯಲ್ಲಿ ಕರ್ನಾಟಕ ದೇಶದಲ್ಲಿಯೇ ಮುಂದಿನ ಸ್ಥಾನದಲ್ಲಿದೆ. ಇದು ಅಭಿವೃದ್ಧಿಯ ಸೂಚಕವಾಗಿದ್ದರೂ, ವಿಪತ್ಕಾರಕವೂ ಆಗಿದೆ. ಅದೃಷ್ಟವಶಾತ್ ಕೈಗಾರಿಕಾ ನಿಯಂತ್ರಣ ಕಾನೂನುಗಳು ರಾಜ್ಯದಲ್ಲಿ ಈವರೆಗೆ ಯಾವುದೇ ದೊಡ್ಡ ದುರಂತಗಳು ಸಂಭವಿಸದಂತೆ ತಡೆದಿವೆ. ರಾಜ್ಯ ಪ್ರಗತಿ ಹೊಂದಿದಂತೆಲ್ಲಾ ನಗರೀಕರಣದಿಂದಾಗಿ ರೈಲು, ರಸ್ತೆ, ವಿಮಾನ ದುರಂತಗಳು ಸಂಭವಿಸುವ ಸಾಧ್ಯತೆಯಿದ್ದು ಅದನ್ನು ನಿಯಂತ್ರಿಸುವ ಪ್ರಯತ್ನ ಮಾಡಬೇಕಿದೆ.

ವಿಪತ್ತು ನಿರ್ವಹಣೆಯಲ್ಲಿ ಸಮುದಾಯಗಳು ಪರಂಪರಾನುಗತ ಅನುಭವವನ್ನು ಉಪಯೋಗಿಸಿಕೊಳ್ಳುತ್ತಿದ್ದು, ಮತ್ತಷ್ಟು ಮಾಹಿತಿ, ಪರಿಣತಿ ಮತ್ತು ಕುಶಲತೆಗಳನ್ನು ನೀಡಿ ವಿಪತ್ತು ನಿರ್ವಹಣೆಯಲ್ಲಿ ಸಮುದಾಯವನ್ನು ಸಬಲೀಕರಣಗೊಳಿಸಬಹುದಾಗಿದೆ. ರೆಡ್‌ಕ್ರಾಸ್ ಸಂಸ್ಥೆ ಸಮುದಾಯ ಆಧಾರಿತ ಅಪಾಯ ನಿರ್ವಹಣೆ ಅಂಶಗಳನ್ನು ಪ್ರತಿಪಾದಿಸುತ್ತದೆ.

***************

ಅನುಸೂಚಿ–3

ಕೌಶಲ್ಯ ಮತ್ತು ಪರಿಣತಿ ತರಬೇತಿ:

ಉದ್ಯೋಗ ದೊರಕಿಸಿಕೊಳ್ಳಲು, ಅದರಲ್ಲಿ ಉಳಿಯಲು ಮತ್ತು ಅದರಲ್ಲಿ ಪದೋನ್ನತಿ ಪಡೆಯಲು ಅವಶ್ಯಕವಾದ ಕೆಲವು ಸಾಮಾನ್ಯ ಕೌಶಲ್ಯ ಮತ್ತು ಪರಿಣತಿಗಳನ್ನು ಜಾಗತಿಕ ಮಟ್ಟದಲ್ಲಿ ಗುರುತಿಸಲಾಗಿದೆ. ಒಬ್ಬ ಪ್ರಜೆಯಾಗಿ, ಪೋಷಕರಾಗಿ, ಸಮಾಜದ ಪಾಲುದಾರರಾಗಿ, ಪರಿಣಾಮಕಾರಿಯಾಗಿ ಪಾತ್ರ ನಿರ್ವಹಿಸಲು ಕೆಲವು ಮೂಲಭೂತ, ಸಾಮರ್ಥ್ಯ ಮತ್ತು ಕುಶಲತೆಗಳ ಅಗತ್ಯವಿದೆ.

ಈ ಕುಶಲತೆಗಳು ಯಾವುವು ಮತ್ತು ಯಾವ ಮಟ್ಟದ ಕುಶಲತೆಗಳು ಅಗತ್ಯವಿದೆ ಎನ್ನುವುದರ ಬಗ್ಗೆ ಮಾರ್ಗದರ್ಶನದ ಕೊರತೆಯಿದೆ. ಶಾಲಾ ಶಿಕ್ಷಣ, ಓದುವುದು, ಬರೆಯುವುದು ಮತ್ತು ಲೆಕ್ಕಾ ಮಾಡುವುದರ ಮೇಲೆಯೇ ಹೆಚ್ಚು ಒತ್ತು ನೀಡುತ್ತವೆ. ಈ ಕುಶಲತೆಗಳನ್ನು ಕಲಿಸುವ ಸಂಸ್ಥೆಗಳು ಅದಕ್ಕೆ ಅಗತ್ಯವಾದ ಕಾರ್ಯಕ್ರಮಗಳೂ ಇದ್ದು ಅವು ದುಬಾರಿ ಶುಲ್ಕವನ್ನು ವಿಧಿಸುತ್ತವೆ.

ಸಂಶೋಧಕರು ಪ್ರಾಮುಖ್ಯವಾದ ಐದು ಮಾಹಿತಿ ಕ್ಷೇತ್ರಗಳನ್ನು ಗುರುತಿಸಿದ್ದಾರೆ.

1. ಬಳಕೆದಾರರ ಆರ್ಥಿಕ ಜ್ಞಾನ.
2. ಉದ್ಯೋಗ ಮಾಹಿತಿ.
3. ಸಮುದಾಯದಲ್ಲಿನ ಸಂಪನ್ಮೂಲಗಳ ಪರಿಜ್ಞಾನ.
4. ಆರೋಗ್ಯದ ಬಗ್ಗೆ ಅರಿವು ಮತ್ತು
5. ಕಾನೂನು ಮತ್ತು ಆಡಳಿತದ ತಿಳುವಳಿಕೆ.

ಇದೇ ರೀತಿ ಐದು ಕೌಶಲ್ಯಗಳನ್ನು ಗುರುತಿಸಲಾಗಿದೆ.

1. ಸಂವಹನ.
2. ಸಾಮಾನ್ಯ ಗಣಿತ.
3. ಸಮಸ್ಯೆ ಪರಿಹಾರ.
4. ಸಂಬಂಧಗಳು.
5. ಜೀವ ರಕ್ಷಣೆ.

ಉತ್ತಮ ಕಾರ್ಯಕ್ಷಮತೆ, ಆರ್ಥಿಕ ಉತ್ಪಾದಕತೆ ಮತ್ತು ಸಾಮಾಜಿಕವಾಗಿ ಪ್ರಯೋಜನಕಾರಿ ಸದಸ್ಯನಾಗಿ ಕರ್ತವ್ಯಗಳನ್ನು ನಿರ್ವಹಿಸಲು ಮೇಲೆ ಗುರುತಿಸಿದ ಅಂಶಗಳಲ್ಲದೆ, ಬೇರೆ ಕೆಲವು ಅರಿವು ಮತ್ತು ಕುಶಲತೆಗಳ ಅಗತ್ಯವಿದೆ. ಅವುಗಳಲ್ಲಿ ಸಾಮಾಜಿಕ ಮತ್ತು ರಾಜಕೀಯ ಅರಿವು, ವೈಯುಕ್ತಿಕ ಅಥವಾ ಗುಂಪಿನ ವರ್ತನೆಗಳು ವ್ಯಕ್ತಿ ಅಥವಾ ಸಮಾಜದ ಮೇಲೆ ಬೀರಬಹುದಾದ ಪರಿಣಾಮಗಳು, ವ್ಯಕ್ತಿ ಅಥವಾ ಗುಂಪುಗಳು ಪ್ರಸಕ್ತ ರಾಜಕೀಯ ಸಂಸ್ಥೆಗಳು ಅಥವಾ ರಾಜಕೀಯ ಪ್ರಕ್ರಿಯೆಗಳೊಂದಿಗೆ ಇಟ್ಟುಕೊಳ್ಳುವ ಸಂಪರ್ಕ ಮುಖ್ಯವಾಗುತ್ತವೆ.

ಇದಲ್ಲದೇ ವೈಯುಕ್ತಿಕ ಮತ್ತು ಉದ್ಯೋಗ ಕ್ಷೇತ್ರದಲ್ಲಿರಬಹುದಾದ ಪರ್ಯಾಯ ಅವಕಾಶಗಳನ್ನು ಗುರುತಿಸಿ, ಆಯ್ಕೆಮಾಡಿ ಅದರಲ್ಲಿ ಪ್ರಗತಿ ಸಾಧಿಸುವುದು. ತನ್ನದಕ್ಕಿಂತ ಭಿನ್ನ ಸಂಸ್ಕೃತಿಯಲ್ಲಿನ ಆಹಾರ, ಆಚಾರ, ವಿಚಾರ, ಉಡುಗೆ, ವಸತಿ, ವೃತ್ತಿ ಮತ್ತು ಸಾಮಾಜಿಕ ಸಂಬಂಧಗಳ ಪರಿಜ್ಞಾನ, ವ್ಯಕ್ತಿಗತ ಜೀವನ ಮತ್ತು ಬದುಕಿನ ಮಾರ್ಗಗಳ ಮೇಲೆ ಸಮಾಜ ಬೀರಬಹುದಾದ ಪ್ರಭಾವದ ಅರಿವು, ತನ್ನ ಸುತ್ತಲಿನ ಪ್ರಪಂಚದ ಪ್ರಗತಿ, ಪರಿಸ್ಥಿತಿ ಮತ್ತು ಶಕ್ತಿಗಳ ಮೇಲೆ ವ್ಯಕ್ತಿ ಬೀರಬಲ್ಲ ಪರಿಣಾಮಗಳು ದೇಶ, ಪ್ರದೇಶ, ಪ್ರಜೆಗಳ ನಡುವಿನ ಪರಸ್ಪರ ಅವಲಂಬನೆ ಮತ್ತು ಅವುಗಳ ನಡುವಿನ ಸಂಬಂಧಗಳ ಅರಿವು, ನಮ್ಮ ಬದುಕಿನ ರೀತಿ-ನೀತಿಗಳಿಗೆ ಸಂಬಂಧಿಸಿದಂತೆ ವಿವಿಧ ಜನರು ನೀಡಿರಬಹುದಾದ ಕೊಡುಗೆಗಳ ಅರಿವು, ವ್ಯಕ್ತಿಗಳ, ಸಮುದಾಯಗಳ, ರಾಜ್ಯಗಳ ಮತ್ತು ರಾಷ್ಟ್ರಗಳ ನಡುವಿನ ಸಂವಹನ ಮಾಧ್ಯಮಗಳ ತಿಳುವಳಿಕೆ ಅಗತ್ಯವಾಗುತ್ತವೆ.

ಗ್ರಾಮೀಣ ಮತ್ತು ಪಟ್ಟಣ ಪ್ರದೇಶ, ನಗರ ಮತ್ತು ಕೃಷಿಭೂಮಿ, ಸಮೃದ್ಧ ಮತ್ತು ಕೊರತೆ ಆದಾಯದ ಜೀವನ ಮಾರ್ಗ – ಇವುಗಳ ವೈರುಧ್ಯ ಮತ್ತು ಹೋಲಿಕೆಯನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ನಮ್ಮ ಒಟ್ಟಾರೆ ಸಂಸ್ಕೃತಿಯಲ್ಲಿರುವ ಜನಾಂಗೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಜೀವನ ಪದ್ಧತಿಗಳನ್ನು ಅರ್ಥಮಾಡಿಕೊಂಡು ಮೆಚ್ಚುವ ಮತ್ತು ಬಲಪಡಿಸುವ ಮನೋಭಾವ, ಎಲ್ಲ ಜನರ ಸಂಸ್ಕೃತಿಯನ್ನು ಅರ್ಥಮಾಡಿಕೊಂಡು ಗೌರವಿಸುವ ಸತ್‌ಸಂಪ್ರದಾಯ – ಇವು ಮುಖ್ಯವಾಗಿವೆ.

***************

ಅನುಬಂಧ-4

ರಕ್ತದಾನದ ಬಗ್ಗೆ ಮಾಹಿತಿ:

- ರಕ್ತಕ್ಕೆ ಪರ್ಯಾಯವಿಲ್ಲ.
- ರಕ್ತವನ್ನು ಕೃತಕವಾಗಿ ಉತ್ಪಾದಿಸಲು ಸಾಧ್ಯವಿಲ್ಲ.
- ರಕ್ತದಾನದಿಂದ ಮಾತ್ರ ರಕ್ತವನ್ನು ಪಡೆಯಲು ಸಾಧ್ಯ.
- ಎಲ್ಲ ಆರೋಗ್ಯವಂತರೂ ರಕ್ತದಾನ ಒಂದು ಕರ್ತವ್ಯವೆಂದು ಭಾವಿಸಿದರೆ ಮಾತ್ರ ಅಪಘಾತದಲ್ಲಿ ಗಾಯಗೊಂಡವರಿಗೆ ಚಿಕಿತ್ಸೆ ನೀಡಬಹುದು.
- ರಕ್ತದಾನ ಮಾಡಿದ ಕೆಲವೇ ನಿಮಿಷಗಳಲ್ಲಿ ದೇಹ ಅದನ್ನು ತುಂಬಿಸಿಕೊಳ್ಳುವ ಪ್ರಕ್ರಿಯೆ ಮುಗಿಯುತ್ತದೆ.
- ಎರಡೇ ವಾರಗಳಲ್ಲಿ ರಕ್ತದಾನಿಗಳು ದಾನಮಾಡಿದ ರಕ್ತದಲ್ಲಿನ ಎಲ್ಲ ಘಟಕಾಂಶಗಳನ್ನು ಮತ್ತೆ ಗಳಿಸಿಕೊಳ್ಳುತ್ತಾರೆ.
- ರಕ್ತದಾನದ ಸಂದರ್ಭದಲ್ಲಿ ಒಂದು ಇಂಜಕ್ಷನ್ ತೆಗೆದುಕೊಂಡಿದ್ದಕ್ಕಿಂತ ಹೆಚ್ಚು ನೋವಾಗಲಾರದು.
- ರಕ್ತದಾನದ ಅವಧಿ 20 ನಿಮಿಷಕ್ಕಿಂತ ಹೆಚ್ಚು ಹೊತ್ತು ತೆಗೆದುಕೊಳ್ಳುವುದಿಲ್ಲ.

ಯಾರು ರಕ್ತದಾನ ಮಾಡಬಹುದು?

- 18 ರಿಂದ 60 ವಯಸ್ಸಿನ ಮಹಿಳೆಯರಾಗಲಿ ಪುರುಷರಾಗಲಿ ರಕ್ತದಾನ ಮಾಡಬಹುದು.
- ಪುರುಷರು 3 ತಿಂಗಳಿಗೊಮ್ಮೆ, ಮಹಿಳೆಯರು 6 ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು. ಪುರುಷ ದಾನಿಗಳ ತೂಕ 45 ಕೆ.ಜಿ. ಮಹಿಳಾ ದಾನಿಗಳ ತೂಕ 50 ಕೆ.ಜಿ. ಅಥವಾ ಅದಕ್ಕಿಂತ ಮೇಲಿರಬೇಕು.
- ದಾನಿಗಳ ಸಿಸ್ಟಾಲಿಕ್ ರಕ್ತದ ಒತ್ತಡ 140 ಹಾಗೂ ಡಯಾಸ್ಟಾಲಿಕ್ ರಕ್ತದ ಒತ್ತಡ 70 ರಿಂದ 100 ಇರಬೇಕು.
- ರಕ್ತದಲ್ಲಿ ಹಿಮೋಗ್ಲೋಬಿನ್ ಅಂಶ 12.5 ಕ್ಕಿಂತ ಹೆಚ್ಚಿರಬೇಕು.

ಯಾರು ರಕ್ತದಾನ ಮಾಡುವಂತಿಲ್ಲ?

- ರಕ್ತದಾನಿ ಸಾಂಕ್ರಾಮಿಕ ಕಾಯಿಲೆಯಿಂದ ಬಳಲುತ್ತಿದ್ದರೆ.
- 72 ಗಂಟೆಗಳೊಳಗೆ ಆಲ್ಕೋಹಾಲ್ ಅಥವಾ ಆಂಟಿಬಯೋಟಿಕ್‌ಗಳನ್ನು ಸೇವಿಸಿದ್ದರೆ.
- ನಾಲ್ಕು ವಾರಗಳೊಳಗೆ ಯಾವುದಾದರೂ ಕಾಯಿಲೆ ವಿರುದ್ಧ ವ್ಯಾಕ್ಸಿನೇಷನ್ ಮಾಡಿಸಿಕೊಂಡಿದ್ದರೆ.
- ಮಲೇರಿಯಾ ಚಿಕಿತ್ಸೆ ಪಡೆಯುತ್ತಿದ್ದರೆ, ಚಿಕಿತ್ಸಾ ದಿನದಿಂದ ಮೂರು ತಿಂಗಳು ಮೊದಲೇ.
- ಆಸ್ಪಿರಿನ್ ಮಾತ್ರೆಗಳನ್ನು ಸೇವಿಸಿದ್ದರೆ 3 ದಿನಗಳವರೆಗೂ, ತಾನೇ ರಕ್ತಪಡೆದಿದ್ದರೆ, ಮೂರು ತಿಂಗಳ ಮೊದಲೇ ಮೇಜರ್ ಶಸ್ತ್ರ ಚಿಕಿತ್ಸೆಯಾಗಿದ್ದರೆ 6 ತಿಂಗಳ ಮೊದಲೇ, ಜಾಂಡೀಸ್, ಡಯಾಬಿಟಿಕ್, ಕಾನ್ಸರ್ ಹೆಪಟೈಟಿಸ್ ಬಿ ಮತ್ತು ಸಿ ಮತ್ತು ಹೃದಯರೋಗ, ಅಸ್ವಾಭಾವಿಕ ರಕ್ತಸ್ರಾವ, ಸಕಾರಣವಿಲ್ಲದ ತೂಕ ಇಳಿಯುವಿಕೆ, ಕಿಡ್ನಿ – ಲಿವರ್‌ಗೆ ಸಂಬಂಧಿಸಿದ ಕಾಯಿಲೆ ಬ್ರಾಂಕೈಟಿಸ್, ಮೂರ್ಛೆ ಕಾಯಿಲೆ ಮತ್ತು ಮಾನಸಿಕ ಅಸ್ವಸ್ಥತೆ ಇರುವವರು.

****************